ವಿಜಯಪುರ | ಸಂಪುಟ 01 | ಸಂಚಿಕೆ 314 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

editor.udayarashmi@gmail.com RNI NO: KARKAN/2023/86203 ಶನಿವಾರ, ಫೆಬ್ರವರಿ 10, 2024

“ನಾನು ಐದು ವರ್ಷ ಸಕ್ಕರೆ ಕಾರ್ಖಾನೆಯನ್ನು ಭ್ರಷ್ಟಾಚಾರ ರಹಿತವಾಗಿ ನಡೆಸಿಕೊಂಡು ಹೋಗಿರುವ ವಿಶ್ವಾಸವಿದ್ದರೆ ನಮಗೆ ಇನ್ನೊಮ್ಮೆ ಅವಕಾಶ ನೀಡಿ.”

– ಯಶವಂತ್ರಾಯಗೌಡ ಪಾಟೀಲ, ಶಾಸಕ & ಅಧ್ಯಕ್ಷರು ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ




### ಈ ಬಗ್ಗೆ ಕೂಡಲೇ ಸಭೆ ಕರೆದು ಕ್ರಮ ವಹಿಸುವುದಾಗಿ ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

# ಪರಿವಾರ/ತಳವಾರ ಎಸ್‌ಟಿ ಗೆ ಸೇರಿಸಲು ತೀರ್ಮಾನ

ಹರಿಹರ: ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಮಂಡ್ಯ, ಜಿಲ್ಲೆಗಳಲ್ಲಿರುವ ಪರಿವಾರ/ತಳವಾರ ಜನಾಂಗದವರನ್ನು ಪರಿಶಿಷ್ಟ ಪಂಗಡ (ಎಸ್‌ಟಿ)ಕ್ಕೆ ಸೇ–ರಿಸಲು ತೀರ್ಮಾನ ಮಾಡಲಾಗಿದೆ. ಕೂಡಲೇ ಈ ಬಗ್ಗೆ ಸಭೆ ಕರೆದು ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಹರಿಹರದ ರಾಜನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರಪೀಠದ ವತಿಯಿಂದ ಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಾತ್ರೆ– 2024 ಹಾಗೂ ಜನಜಾಗೃತಿ ಜಾಥಾ ಉದ್ಘಾಟಿಸಿ ಮಾತನಾಡಿದ ಸಿಎಂ, ಕೇಂದ್ರ ಸರ್ಕಾರ ಈಗಾಗಲೇ ಈ ಸಮುದಾಯವನ್ನು ಎಸ್‌ಟಿಗೆ ಸೇರ್ಪಡೆ ಮಾಡಿದೆ. ಇಲ್ಲಿ ಇನ್ನೂ ಪ್ರವರ್ಗದಲ್ಲಿರುವ ಸಮುದಾಯದ ಜನರ ಮೇಲಿರುವ ಎಲ್ಲಾ ಪ್ರಕರಣಗಳನ್ನು ವಾಪಸ್ಸು ಪಡೆಯಲೂ ಸೂಚನೆ ನೀಡಲಾಗಿದೆ ಎಂದರು.



**ಬುದ್ಧಿವಂತಿಕೆ ಯಾರ ಸ್ವತ್ತಲ್ಲ**

ಅಕ್ಷರ ಸಂಸ್ಕೃತಿಯಿಂದ ವಂಚಿತರಾದಾಗ ಸಾಮಾಜಿಕ, ಆರ್ಥಿಕ ಅಸಮಾನತೆ ನಿರ್ಮಾಣವಾಗುತ್ತದೆ. ವಿದ್ಯೆ, ಬುದ್ಧಿವಂತಿಕೆ ಯಾರ ಸ್ವತ್ತಲ್ಲ. ಬುದ್ಧಿ, ಜ್ಞಾನ ಪಡೆದಾಗ ಸ್ವಾಭಿಮಾನಿಗಳಾಗಿ ಬದುಕಲು ಸಾಧ್ಯ. ಎಲ್ಲರಿಗೂ ಸಮಾನ ಎಂಬ ಭಾವ ಬರಲು ಸ್ವಾಭಿಮಾನ ಅಗತ್ಯ ಎಂದು ಸಿಎಂ ಹೇಳಿದರು.

**ಸಮ ಸಮಾಜ ನಿರ್ಮಾಣವಾದಾಗಲೇ ರಾಮ ರಾಜ್ಯದ ಸ್ಥಾಪನೆ**

ಬೇಡ ಜನಾಂಗದಲ್ಲಿ ಜನಿಸಿದ ವಾಲ್ಮೀಕಿಯವರು ರಾಮಾಯಣವನ್ನು ರಚಿಸಿ ಮಹರ್ಷಿಯಾದರು. ರಾಮಾಯಣ ಮಹಾನ್ ಗ್ರಂಥ. ಮಹಾನ್ ಗ್ರಂಥಗಳನ್ನು ಮೇಲ್ಜಾತಿಯವರು ಮಾತ್ರ ರಚಿಸಲು ಸಾಧ್ಯವೆಂಬ ಪ್ರತೀತಿಯಿತ್ತು. ಆದ–ರೆ, ಕಾವ್ಯ ಸಾಹಿತ್ಯವನ್ನು ಶೂದ್ರರು ರಚಿಸಬಹುದೆಂಬುದನ್ನು ಮಹರ್ಷಿ ವಾಲ್ಮೀಕಿ ನಿರೂಪಿಸಿದರು. ಶ್ರೀರಾಮಚಂದ್ರನ ಕಾಲದಲ್ಲಿಯೇ ಸಮಾನ ಸಮಾಜದ ಹಾಗೂ ಪ್ರಜಾಪ್ರಭುತ್ವದ ಪರಿಕಲ್ಪನೆಯಿತ್ತು. ಪ್ರಜೆಗಳೇ ಆಡಳಿತ ನಡೆಸುವ ಪ್ರಜಾಪ್ರಭುತ್ವದ ಮೂಲವನ್ನು ರಾಮಾಯಣದಲ್ಲಿ ಕಾಣಬಹುದು. ಬಸವಾದಿ ಶರಣರು ತಿಳಿಸಿದಂತೆ ವರ್ಗರಹಿತ, ಜಾತಿರಹಿತ, ಸಮಾನ ಅವಕಾಶ ನೀಡುವ ಸಮಾಜ ನಿರ್ಮಾಣವಾದಾಗ ಅದನ್ನು ರಾಮ ರಾಜ್ಯ ಎಂದು ಹೇಳಬಹುದು ಎಂದರು.

**ಸಹಿಷ್ಣುತೆ ಹಾಗೂ ಸಹಬಾಳ್ವೆ**

ಇಂದು ಜಾತಿ ಜಾತಿಗಳನ್ನು ಒಡೆಯುವ ಕೆಲಸವನ್ನು ಪಟ್ಟಭದ್ರ ಹಿತಾಸಕ್ತಿಗಳು ಮಾಡುತ್ತಿವೆ. ಸಮ ಸಮಾಜದ ಆಶಯವನ್ನೇ ಸಂವಿಧಾನ ಪ್ರತಿಪಾದಿಸುತ್ತದೆ. ಸಂವಿಧಾನದ ಆಶಯಗಳನ್ನು ಜಾರಿಗೆ ತರುವುದೇ ಸರ್ಕಾರದ ಗುರಿಯಾಗಿದೆ. ಸಹಿಷ್ಣುತೆ ಹಾಗೂ ಸಹಬಾಳ್ವೆಯನ್ನು ಮಾಡಬೇಕೆಂದು ಸಂವಿಧಾನ ಹೇಳುತ್ತದೆ. ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರಿಗೆ ಸರಿಯಾದ ಅವಕಾಶ ದೊರೆತಲ್ಲಿ ಉತ್ತಮವಾಗಿ ಜೀವನ ರೂಪಿಸಿಕೊಳ್ಳುತ್ತಿದ್ದರು. ಇವರಿಗೆ ಸಮಾನ ಅವಕಾಶಗಳು ದೊರೆತಾಗ ಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ ಎಂದು ಸಿಎಂ ಪ್ರತಿಪಾದಿಸಿದರು.

---

**ರಾಜ ನುಡಿ**

ವಿಚಾರಗಳು ಬದಲಾಗುವವರೆಗೆ ಕೇವಲ ದೇಹವಾಗಿರುತ್ತೇವೆ. ವಿಚಾರಗಳು ಬದಲಾದಾಗ ಮನುಷ್ಯರಾಗುತ್ತೇವೆ. ಬಹುತೇಕರು ನಾವು ಕೊನೆಯವರೆಗೂ ದೇಹವಾಗೇ ಉಳಿದು ಬಿಡುತ್ತೇವೆ.

–ಡಾ. ರಾಜಶೇಖರ ನಾಗೂರ

---

# ಹೊರಗುತ್ತಿಗೆ ಟೆಂಡರ್ ರದ್ದುಗೊಳಿಸಲು ದಿನಗೂಲಿ ನೌಕರರ ಆಗ್ರಹ

ಉದಯರಶ್ಮಿ ನ್ಯೂಸ್

ಆಲಮಟ್ಟಿ: ಆಲಮಟ್ಟಿಯ ವಿವಿಧ ಉದ್ಯಾನಗಳನ್ನು ನಿರ್ವಹಣೆಯನ್ನು ಹೊರಗುತ್ತಿಗೆ ಟೆಂಡರ್ ಕರೆಯಲಾಗಿದ್ದು, ಅದನ್ನು ತಕ್ಷಣವೇ ರದ್ದುಗೊಳಿಸಿ ಈಗಿದ್ದ ಸ್ಥಿತಿಯನ್ನೇ ಮುಂದುವರೆಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ದಿನಗೂಲಿ ನೌಕರರ ಸಂಘ ಆಗ್ರಹಿಸಿದೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ವಿರೂಪಾಕ್ಷಿ ಮಾದರ, ಕಳೆದ 25 ವರ್ಷಕ್ಕೂ ಹೆಚ್ಚಿನ ಕಾಲದಿಂದ 370 ಕ್ಕೂ ಅಧಿಕ ಅರಣ್ಯ ದಿನಗೂಲಿ ಕಾರ್ಮಿಕರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಲಮಟ್ಟಿಯ ವಿವಿಧ ಉದ್ಯಾನಗಳ ನಿರ್ಮಾಣ ಹಾಗೂ ನಿರ್ವಹಣೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಅವರಿಗೆಲ್ಲಾ ಅರಣ್ಯ ಇಲಾಖೆಯ ನಿಗದಿಪಡಿಸಿರುವ ದಿನಗೂಲಿಗಳ ಆಧಾರದ ಮೇಲೆ ಕೃಷ್ಣಾ ಭಾಗ್ಯ ಜಲ ನಿಗಮದ ಅರಣ್ಯ ವಿಭಾಗವೂ ವೇತನ ಪಾವತಿ ಮಾಡುತ್ತಿದೆ.


ಅತ್ಯಂತ ಕಡಿಮೆ ಸಂಬಳದಲ್ಲಿ ಇಲ್ಲಿ ದುಡಿಯುತ್ತಿದ್ದಾರೆ. ಆದರೆ ಈಗ ಈ ಉದ್ಯಾನದ ನಿರ್ವಹಣೆಯ ಹೊಣೆಯನ್ನು ಹೊರಗುತ್ತಿಗೆ ನೀಡಲು ಟೆಂಡರ್ ಕರೆಯಲಾಗಿದೆ. ಇದರಿಂದ ಕಳೆದ 25 ವರ್ಷಗಳಿಂದಲೂ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ–ರಿಗೆ ನೌಕರಿ ಕಳೆದುಕೊಳ್ಳುವ ಭೀತಿ ಆವರಿಸಿದೆ. ಇದೇ ಸಂಬಳದಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿರುವ ಕಾರ್ಮಿಕರಿಗೆ ಹೊರಗುತ್ತಿಗೆ ಟೆಂಡರ್ ದಿಗಿಲು ಬಡಿಸಿದೆ ಎಂದು ಅವರು ಹೇಳಿದರು.

ತಕ್ಷಣವೇ ಈ ಟೆಂಡರ್ ರದ್ದುಗೊಳಿಸಬೇಕು ಎಂದು ನಾವು ಮನವಿ ಮಾಡುತ್ತೇವೆ, ಅಷ್ಟಕ್ಕೂ ಟೆಂಡರ್ ರದ್ದುಗೊಳಿಸದಿದ್ದರೇ ಹೋರಾಟ ಅನಿವಾರ್ಯ ಎಂದರು.

ಈ ಸಂದರ್ಭದಲ್ಲಿ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಬಸಪ್ಪ ಗುಡಿಮನಿ, ಅಪ್ಪಣ್ಣ ವಾಲೀಕಾರ, ಮಹೇಶ ತೆಲಗಿ, ಕಾಶೀನಾಥ ಬಿಂಗಿ, ಮರಿಯಪ್ಪ ವಾಲಿಕಾರ, ಬಸಪ್ಪ ತುಂಬರಮಟ್ಟಿ, ರಮೇಶ ಪವಾರ, ಪ್ರಕಾಶ ಮಾಲಗತ್ತಿ, ಭೀಮಶಿ ಮಾದರ, ಶೇಖಪ್ಪ ಹಡಪದ, ಗೋಪಾಲ ಚಲವಾದಿ, ಅಲ್ಲಾಸಾಬ್ ಮೆಟಗುಡ ಮತ್ತೀತರರು ಇದ್ದರು.

---

**ವಚನ ಚಿಂತನ 298**



*ಭಕ್ತನಾದಲ್ಲಿ ಆವ ಸೋಂಕು ಬಂದಡೂ ಭಾವಶುದ್ಧವಾಗಿರಬೇಕು.*

*ಭಕ್ತನಾದಲ್ಲಿ ಆವ ಸೋಂಕು ಬಂದಡೂ ಭಾವಶುದ್ಧವಾಗಿರಬೇಕು.*
*ಭಕ್ತಂಗಲ್ಲದೆ ತಾಕು ಸೋಂಕು ಮತ್ತೊಬ್ಬರಿಗೆ ಬಾರವು.*
*ಬಿರಿದ ಕಟ್ಟಿದ ಬಂಟಂಗೆ ತಡಹಲ್ಲದೆ ಬರುಬರಿಗುಂಟೆ*
*ಮನೆದಗಹು? ನಿಮ್ಮನರಿವಂಗೆ ಮರವೆ ಬಂದಡೆ*
*ನಿಮ್ಮನರಿದು ತನ್ನ ತಾನರಿಯಬೇಕೆಂಬುದ ನಿನ್ನ ನೀ ತಿಳಿ,*
*ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ.*

*– ಕೋಲ ಶಾಂತಯ್ಯನವರು*

ಸೋಂಕು ಎನ್ನುವುದು ಇಂದು ಜಗತ್ತನ್ನೇ ಕಾಡುತ್ತಿದ್ದು ಇದರಿಂದ ಪಾರಾಗುವ ಬಗೆಯ ಬಗ್ಗೆ (ಮುಂದುವರಿದ ರಾಷ್ಟ್ರಗಳಲ್ಲಿ ಸೂಕ್ತ ಔಷಧಕ್ಕಾಗಿ ) ಇನ್ನೂ ಸಂಶೋಧನೆಗಳು ಜಾರಿಯಲ್ಲಿದ್ದು ಸ್ವಚ್ಛತೆ ಹಾಗೂ ಮಾನಸಿಕ ಸ್ಥೈರ್ಯದಿಂದ ಮಾತ್ರ ಸೋಂಕಿನಿಂದ ಪಾರಾಗಬಹುದೆಂಬ ಸಾರ್ವತ್ರಿಕ ಸತ್ಯವನ್ನೇ ಇಲ್ಲಿ ಕೋಲ ಶಾಂತಯ್ಯನವರು ತಮ್ಮ ವಚನದಲ್ಲಿ ವಿವ–ರಿಸಿದ್ದಾರೆ. ರೋಗನಿರೋಧಕ ಶಕ್ತಿಯನ್ನು ಹೊಂದಿರುವ ಪ್ರತಿಯೊಬ್ಬರ ಅಂಗಕ್ಕೆ ಮಾನಸಿಕ ಸ್ಥೈರ್ಯವು ಜೊತೆಗಿದ್ದರೆ ಯಾವುದೇ ಸೋಂಕನ್ನು ಹತ್ತಿಕ್ಕಬಲ್ಲ ಸಾಮರ್ಥ್ಯವನ್ನು ಅಂಗ ಹೊಂದುತ್ತದೆ ಎಂಬುದು ವೈದ್ಯರ ಅಭಿಮತ, ಇದನ್ನು ವಚನದ ಮೊದಲ ಸಾಲಿನಲ್ಲಿ “ಭಕ್ತನಾದಲ್ಲಿ ಆವ ಸೋಂಕು ಬಂದಡೂ ಭಾವಶುದ್ಧವಾಗಿರಬೇಕು.”ಎಂಬ ಧೈರ್ಯವನ್ನು ತುಂಬಿದ್ದಾರೆ. ಈ ವಚನದಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ಸೋಂಕು ಸಾಂಕ್ರಾಮಿಕವಾಗಿ ಹರಡುತ್ತದೆ ಎಂಬುದನ್ನು ಸೂಚಿಸುವ “ತಾಕು”(=ಪರಸ್ಪರ ಬಾಧಿಸುವು ದು)ಎಂಬ ಪದ ಬಳಕೆಯಾಗಿರುವುದು “ಭಕ್ತಂಗಲ್ಲದೆ ತಾಕು ಸೋಂಕು ಮತ್ತೊಬ್ಬರಿಗೆ ಬಾರವು” ಪ್ರತ್ಯೇಕವಾದ ಒಂದು ಹುಲ್ಲಿನಕಡ್ಡಿ ಬಾಗಿ ಮುರಿದು ಹೋಗಬಹುದು ಆದರೆ ಅಂತಹ ಅನೇಕ ಕಡ್ಡಿಗಳನ್ನು ಬಿಗಿಯಾಗಿ ಕಟ್ಟಿದಾಗ ಬಾಗುವಿಕೆ ಇಲ್ಲವಾಗುತ್ತದೆ ಎನ್ನುವಲ್ಲಿ, ನಾನು ಕೇವಲ ಅಂಗ ಎಂದು ಭಾವಿಸಿದರೆ ಸೋಂಕು ನಮ್ಮನ್ನು ಬಾಧಿಸುತ್ತದೆ ನಾನು ಅಂಗದೊಂದಿಗಿನ ಲಿಂಗ ಎನ್ನುವ ಭಾವವನ್ನು ತಾಳಿದಾಗ ಯಾವ ಸೋಂಕು ನಮ್ಮನ್ನು ಭಾದಿಸಲು ಸಾಧ್ಯವಿಲ್ಲ ಎಂಬ ಮಾನಸಿಕ ಸ್ಥೈರ್ಯವನ್ನು ಕೊಟ್ಟಿದ್ದಾರೆ. ಸೋಂಕಿನಿಂದ ಪಾರಾಗಲು ಅದರ ಬಗ್ಗೆ ಭಯಪಡದೆ ಸುರಕ್ಷತೆಯ ಅರಿವನ್ನು ಹೊಂದುವ ಮಾನಸಿಕ ಸ್ಥೈರ್ಯವನ್ನು ಈ ವಚನದಲ್ಲಿ ನೀಡಲಾಗಿದೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

---

# ಈಗಿದ್ದ ಪ್ರಾಚಾರ್ಯರನ್ನೇ ಮುಂದುವರಿಸಲು ವಿದ್ಯಾರ್ಥಿಗಳ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಈಗಿರುವ ಪ್ರಾಚಾರ್ಯರನ್ನು ಮುಂದುವ–ರಿಸಬೇಕೆಂದು ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದರು.




ಪ್ರತಿಭಟನೆ ಉದ್ದೇಶಿಸಿ ಕಾಲೇಜಿನ ಸಲಹಾ ಸಮಿತಿ ಸದಸ್ಯ, ವ್ಹಿಡಿಸಿಸಿ ಬ್ಯಾಂಕಿನ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ ಮಾತನಾಡಿ, ಮನಗೂಳಿ ಪಟ್ಟಣ ಸೇರಿದಂತೆ ಈ ಭಾಗದ ವಿದ್ಯಾರ್ಥಿಗಳಿಗೆ ಪದವಿ ಶಿಕ್ಷಣ ಸಿಗುವಂತಾಗಲಿ ಎಂಬ ಉದ್ದೇಶದಿಂದ ಇಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅನ್ನು ಸಚಿವ ಶಿವಾನಂದ ಪಾಟೀಲರ ಮುತುವರ್ಜಿಯಿಂದ ಆರಂಭವಾಗಿದೆ. ಮೊದಲು ಉರ್ದು ಶಾಲೆಯಲ್ಲಿ ಆರಂಭವಾಗಿತ್ತು. ಈ ಭಾಗದ ಜನ–ರಿಗೆ ಮನದಟ್ಟು ಮಾಡುವ ಮೂಲಕ ತಮ್ಮ ಮಕ್ಕಳನ್ನು ಸರ್ಕಾರಿ ಪದವಿ ಕಾಲೇಜಿಗೆ ಪ್ರವೇಶ ಮಾಡುವಂತೆ ಮಾಡಲಾಗಿದೆ. ಅಲ್ಲದೇ ಸುಮಾರು 5 ಕೋಟಿ ವೆಚ್ಚದಲ್ಲಿ ಕಾಲೇಜು ಕಟ್ಟಡ ನಿರ್ಮಾಣವಾಗಿದೆ. ಅಲ್ಲದೇ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ವಸತಿ ನಿಲಯದ ಕಟ್ಟಡವನ್ನು ಸಹ ಸಚಿವರು ನಿರ್ಮಾಣ ಮಾಡಿಸಿದ್ದಾರೆ. ಪದವಿ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಐ.ಎಸ್. ಮಠಪತಿ ಎಂಬ ಉಪನ್ಯಾಸಕರು ಕಾಲೇಜಿನ ಸಲಹಾ ಸಮಿತಿ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ವಿದ್ಯಾರ್ಥಿಗಳಿಗೂ ತೊಂದರೆ ಕೊಡುತ್ತಿದ್ದಾರೆ. ಇಂತಹವರು ಕಾಲೇಜಿನ ಪ್ರಾಚಾರ್ಯರಾಗಬಾರದೆಂದು ವಿದ್ಯಾರ್ಥಿಗಳ ಬೇಡಿಕೆಯಿದೆ. ಕೂಡಲೇ ಅವರು ಈ ಕಾಲೇಜಿನಿಂದ ವರ್ಗಾವಣೆಯಾಗಿ ಬೇರೆಡೆ ಹೋಗಬೇಕು. ಈಗಿರುವ ಪ್ರಾಚಾರ್ಯರನ್ನು ಕಾಲೇಜಿನಲ್ಲಿ ಮುಂದುವರಿಸಿ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಸಿಗುವಂತೆ ಸಂಬಂಧಿಸಿದ ಮೇಲಾಧಿಕಾ–ರಿಗಳು ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು.

ವಿದ್ಯಾರ್ಥಿಗಳು ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿರುವ ಸಚೀನ ಪಾಟೀಲ ಅವರ ಸ್ಥಾನಕ್ಕೆ ಬೇರೆಯವರು ಬೇಡ. ಪ್ರಾಚಾರ್ಯ ಸಚೀನ ಪಾಟೀಲ ಅವರು ಕಾಲೇಜಿನ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಬಡ ವಿದ್ಯಾಥಿಗಳಿಗೆ ಸಾಕಷ್ಟು ಸಹಾಯ ಮಾಡಿದ್ದಾರೆ. ಇಂತಹ ಪ್ರಾಚಾರ್ಯರನ್ನು ಮುಂದುವರಿಸುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾಲೇಜಿನ ಸಲಹಾ ಸಮಿತಿ ಸದಸ್ಯರಾದ ಮುಖಂಡರಾದ ಬಸವರಾಜ ಸೋಮಪುರ, ವಿಶ್ವನಾಥ–ಗೌಡ ಪಾಟೀಲ, ಶಿವಾನಂದ ಗುಜಗೊಂಡ, ಸಿದ್ದನಗೌಡ ಬಿರಾದಾರ, ಯಲ್ಲಪ್ಪ ರೊಳ್ಳಿ, ಶ್ರೀಕಾಂತ ಸಾರವಾಡ, ಸುಭಾಸ ಹಳೇಮನಿ, ಹಾಜಿಮಸ್ತಾನ ರೊಳ್ಳಿ, ಪರಸಪ್ಪ ಬಿದರಿ, ಪಟ್ಟಣ ಪಂಚಾಯತ ಸದಸ್ಯ ಶಂಕರ ಶಿವಮತ, ವಿದ್ಯಾರ್ಥಿಗಳಾದ ವಿಜು ರಜಪೂತ, ತನ್ವೀರ ಕೊಡಗಾನೂರ, ರೇವಣಸಿದ್ದ ತಳೇವಾಡ, ಭರತಸಿಂಗ ಹಜೇರಿ, ಸಚೀನ ರೊಳ್ಳಿ, ಸಂಗಮೇಶ ಚಿಮ್ಮಲಗಿ, ಐಶ್ವರ್ಯ ಹೊನವಾಡ, ಅಕ್ಷತಾ ನಾಗಮನಿ, ಅಶ್ವಿನಿ ಹಲಗೊಂಡ, ಕಾವೇರಿ ಪ್ರಭಾಕರ, ರಾಧಿಕಾ ಹೂಗಾರ, ಭಾಗ್ಯ ಬೀಳೂರ, ಭಾಗ್ಯ ಪಾಟೀಲ, ಭಾಗ್ಯ ಅಗಸರ, ಜ್ಯೋತಿ ಉಪ್ಪಾರ ಸೇರಿದಂತೆ ಇತರರು ಭಾಗವಹಿಸಿದ್ದರು.

---

### ಭೀಮಾಶಂಕರ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಚುನಾವಣೆ ಪ್ರಚಾರ ಸಭೆಯಲ್ಲಿ ಶಾಸಕ ಯಶವಂತ್ರಾಯಗೌಡ ಸ್ಪಷ್ಟನೆ

# ರೈತರಿಗೆ ಎಫ್‌ಆರ್‌ಪಿ ದರಕ್ಕಿಂತ ಹೆಚ್ಚಿನ ದರ ನೀಡಿಕೆ

ಉದಯರಶ್ಮಿ ನ್ಯೂಸ್

ಇಂಡಿ: 2013ರ ಚುನಾವಣೆಯಲ್ಲಿ ಮಾತು ಕೊಟ್ಟಂತೆ ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ ಕಟ್ಟಿ ಕಬ್ಬು ನುರಿಸಲು ಪ್ರಾರಂಭಿಸಲಾಗಿದೆ. ಈಗ ಇಥೆನಾಲ್ ಘಟಕವನ್ನೂ ಸ್ಥಾಪಿಸಲಾಗುತ್ತಿದೆ. ಅಲ್ಲದೆ ಕಾರ್ಖಾನೆಗೆ ಸಾಲ ನೀಡಿದ ಬ್ಯಾಂಕ್‌ಳಿಗೆ ಪ್ರತೀ ವರ್ಷ ಮಾರ್ಚ 31 ರ ಒಳಗಾಗಿ ಕಂತು ಹಾಗೂ ಬಡ್ಡಿಯನ್ನು ನಿಯಮಿತವಾಗಿ ಕಟ್ಟಲಾಗುತ್ತಿದೆ ಎಂದು ಶಾಸಕ ಯಶವಂತ್ರಾಯಗೌಡ ಪಾಟೀಲ ಹೇಳಿದರು.

ಅವರು ಶುಕ್ರವಾರ ಪಟ್ಟಣದ ಸಿಂದಗಿ ರಸ್ತೆಯ ಧನಶೆಟ್ಟಿ ಮಂಗಲ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಭೀಮಾಶಂಕರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯ ಚುನಾವಣಾ ಪ್ರಚಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

184 ಎಕರೆ ಪ್ರದೇಶದಲ್ಲಿ 100 ವರ್ಷ ಬಾಳಿಕೆ ಬರುವ ಟರ್ಬೈನ್ ಅಳವಡಿಸಿ ಕಾರ್ಖಾನೆ ಕಟ್ಟಲಾಗಿದೆ. ಇದು ಮುಂದಿನ 100 ವರ್ಷಗಳ ಕಾಲ ಕೆಲಸ ಮಾಡುವಂತೆ ಕ್ರಮ ಜರುಗಿಸಲಾಗಿದೆ. ನನ್ನ ಶಕ್ತಿ ಮೀರಿ ಕಾರ್ಖಾನೆ ಕಟ್ಟಿದ್ದೇನೆ. ಇದಕ್ಕೆ ಸಾಲ ಇದ್ದದ್ದು ನಿಜ. ನಿಸರ್ಗ ಅನುಕೂಲ ಕೊಟ್ಟರೆ ಕಾರ್ಖಾನೆ ಹೆಚ್ಚಿನ ಲಾಭದಲ್ಲಿರುತ್ತದೆ. ರೈತರಿಗೆ ಎಫ್‌ಆರ್‌ಪಿ ದರಕ್ಕಿಂತ ಹೆಚ್ಚಿನ ದರ ನೀಡುತ್ತಿದ್ದೇವೆ ಎಂದರು.

ಈ ಕಾರ್ಖಾನೆಯನ್ನು ಶೇರುದಾರ ರೈತರ ಆಸ್ತಿಯನ್ನಾಗಿ ಮಾಡಿದ್ದೇನೆ. 1 ಸಾವಿರ ರೂ, ಗಳ ಶೇರಿನ ಬೆಲೆ ಇದೀಗ 1 ಲಕ್ಷ ರೂ ಆಗಿದೆ. ರೈತರು ಸಹಕಾರ ನೀಡಿ ಸಂಪೂರ್ಣ ಬೆಳವಣಿಗೆಯಾದ ಕಬ್ಬನ್ನು ನೀಡಿದರೆ ರಿಕವರಿ ಹೆಚ್ಚಾಗಿ ಕಾರ್ಖಾನೆಗೆ ಲಾಭವಾಗುತ್ತದೆ. ಆ ನಿಟ್ಟಿನಲ್ಲಿ ರೈತರು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಬರುವ ದಿನಾಂಕ ಫೆ. 11 ರಂದು ಕಾರ್ಖಾನೆಗೆ ನಿರ್ದೇಶಕ ಮಂಡಳಿಗೆ ಚುನಾವಣೆ ನಡೆಯಲಿದ್ದು, ಸಾಮಾನ್ಯ “ಅ” ವರ್ಗಕ್ಕೆ 5 ಜನರನ್ನು ಆಯ್ಕೆ ಮಾಡಬೇಕಿದೆ. 8 ಜನ ಕಣದಲ್ಲಿದ್ದಾರೆ. ಇವರಲ್ಲಿ ನನ್ನನ್ನು ಸೇರಿ ಇನ್ನಿತರ ಅಭ್ಯರ್ಥಿಗಳಾದ ಬಸವರಾಜ ಸಿದ್ರಾಮಪ್ಪ ಧನಶ್ರೀ, ಮಲ್ಲನಗೌಡ ರಾಮಚಂದ್ರಗೌಡ ಪಾಟೀಲ, ರೇವಗೊಂಡಪ್ಪ ಅಣ್ಣಾರಾಯ ಪಾಟೀಲ ಮತ್ತು ಸಿದ್ದಣ್ಣ ರಾಮಣ್ಣ ಬಿರಾದಾರ ಅವರಿಗೆ ಅದರಂತೆ ಮಹಿಳಾ ಮೀಸಲು ಸ್ಥಾನಕ್ಕೆ ಸ್ಪರ್ಧಿಸಿರುವ ಲಲಿತಾ ಅಡಿವೆಪ್ಪ ನಡಗೇರಿ ಮತ್ತು ಸರೋಜಿನಿ ಸಿದ್ದಾರಾಯ ಪಾಟೀಲ ಅವರಿಗೆ ಪರಿಶಿಷ್ಟ ಜಾತಿಯ ಮೀಸಲು ಸ್ಥಾನಕ್ಕೆ ಸ್ಪರ್ಧೆ ಮಾಡಿರುವ ಅಶೋಕ ಅಂಬಾಜಿ ಗಜಾಕೋಶ ಅವ–ರಿಗೆ ತಮ್ಮ ಅಮೂಲ್ಯವಾದ ಮತ ನೀಡಿ ಆಯ್ಕೆ ಮಾಡಬೇಕೆಂದು ಮನವಿ ಮಾಡಿಕೊಂಡರು. ಮಹಿಳಾ ಮೀಸಲು ಸ್ಥಾನಕ್ಕೆ ಸ್ಪರ್ಧೆ ಮಾಡಿರುವ ಇನ್ನೋರ್ವ ಅಭ್ಯರ್ಥಿ ದಾನಮ್ಮ ಕರಬಸಪ್ಪ ಬಿರಾದಾರ ಈಗಾಗಲೇ




ಕಣದಿಂದ ಹಿಂದಕ್ಕೆ ಸರಿದಿರುವದಾಗಿ ಹೇಳಿಕೆ ನೀಡಿದ್ದಾರೆ. ಅವರಿಗೆ ಅಭಿನಂದಿಸುವದಾಗಿ ಹೇಳಿದರು.

ಚುನಾವಣಾ ಪ್ರಚಾರ ಸಭೆಯಲ್ಲಿ ಎಂ.ಆರ್. ಪಾಟೀಲ ಬಳ್ಳೊಳ್ಳಿ, ಬಿಜೆಪಿಯ ಹಿರಿಯ ಮುಖಂಡ ಸಿದ್ಧಲಿಂಗ ಹಂಜಗಿ, ಶಾಂತೇಶ್ವರ ಸಹಕಾರಿ ಸಂಘದ ಅಧ್ಯಕ್ಷ ಶ್ರೀಮಂತ ಇಂಡಿ, ಧನರಾಜ್ ಮುಜಗೊಂಡ, ಇಲಿಯಾಸ್ ಬೋರಾಮಣಿ ಮಾತನಾಡಿ, ಶಾಸಕ ಯಶವಂತರಾಯಗೌಡ ಪಾಟೀಲ ಕಾರ್ಖಾನೆ ಕಟ್ಟಿ ಬೆಳೆಸಿದ್ದಾರೆ, ಕಳೆದ 5 ವರ್ಷಗಳ ಕಾಲ ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ಅವರು ಶಾಸಕರಾಗಿದ್ದರಿಂದ ಸರಕಾರದಿಂದ ಏನಾದರೂ ಸಹಾಯ ಪಡೆಯಲು ಸಾಧ್ಯವಾಗುತ್ತದೆ ಕಾರಣ ಅವರನ್ನು ಬೆಂಬಲಿಸಬೇಕೆಂದು ಮನವಿ ಮಾಡಿಕೊಂಡರು.

ಡಿ.ಎ.ಮುಜಗೊಂಡ ನಿರೂಪಿಸಿ, ವಂದಿಸಿದರು.

# ಭಾರತಕ್ಕೆ ಸಂವಿಧಾನವೇ ದೊಡ್ಡ ಬಲ: ಮಂಜುಳಾ



**ಉದಯರಶ್ಮಿ ನ್ಯೂಸ್**

ವಿಜಯಪುರ: ಸಂವಿಧಾನ ನಮಗೆಲ್ಲ ಮೂಲಭೂತ ಹಕ್ಕುಗಳನ್ನು ನೀಡಿದೆ. ಕರ್ತವ್ಯಗಳನ್ನು ನೀಡಿದೆ. ಭಾರತಕ್ಕೆ ಸಂವಿಧಾನವೇ ಬಹುದೊಡ್ಡ ಬಲ. ನಮ್ಮ ಸಂವಿಧಾನ ನಮ್ಮೆಲ್ಲರನ್ನು ರಕ್ಷಿಸುವ ಬಹುದೊಡ್ಡ ಕಾನೂನು ಗ್ರಾಮ ಪಂಚಾಯತ್ ಅಧ್ಯಕ್ಷೆ ಮಂಜುಳಾ ನಡುವಿನಕೇರಿ ಹೇಳಿದರು.

ವಿಜಯಪುರ ಜಿಲ್ಲೆಯ ಆಲಮೇಲ ತಾಲೂಕಿನ ಮಲಘಾಣ ಗ್ರಾಮದಲ್ಲಿ ಸರ್ಕಾರದ ವತಿಯಿಂದ ಹಮ್ಮಿಕೊಂಡ ಸಂವಿಧಾನ ಜಾಗೃತಿ ಜಾಥಾದ ಅಭಿಯಾನವನ್ನು ಸ್ವಾಗತಿಸಿ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ಸಂವಿಧಾನವು ಜನರನ್ನು ಸಶಕ್ತಗೊಳಿಸಿದೆ. ಸರ್ವರಿಗೂ ಸಮಾನತೆ ಒದಗಿಸಿದೆ ಎಂದು ಹೇಳಿದರು.

ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು, ಯುವಕರು, ಸೇರಿದಂತೆ ಸಾವಿರಾರು ಜನರು ಸಂವಿಧಾನ ಜಾಗೃತಿ ಜಾಥಾದ ಸ್ತಬ್ಧಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಬಳಿಕ ಮುಖ್ಯ ರಸ್ತೆಯಿಂದ ಮೆರವಣಿಗೆದೊಂದಿಗೆ ಅದ್ದೂರಿಯಾಗಿ ಸ್ವಾಗತಿಸಿದರು.

ಸ್ಥಬ್ದಚಿತ್ರ ಜಾಥಾವು ಆಲಮೇಲ ತಾಲೂಕಿನ ಬಮ್ಮನಹಳ್ಳಿ, ಮಲಘಾಣ, ಕಕ್ಕಳಮೇಲಿ, ಬಗಲೂರು, ದೇವರನಾವದಗಿ, ಗ್ರಾಮಗಳಲ್ಲಿ ಸಂಚರಿಸಿ ಸಂವಿಧಾನ ಕುರಿತು ಜಾಗೃತಿ ಮೂಡಿಸಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಸಂಗಮ್ಮ ದುದ್ದನಗಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಸಿದ್ಧರಾಮ ಅಂಕಲಗಿ, ಸಹಾಯಕ ನಿರ್ದೇಶಕರಾದ ಶಿವಲಿಂಗಪ್ಪ ಹಚಡದ, ಪಿಡಿಒ ಸಂಜುಕುಮಾರ ದೊಡ್ಡಮನಿ, ನೋಡಲ್ ಅಧಿಕಾರಿಗಳು ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕರಾದ ಅಧಿಕಾರಿಗಳು, ವಿವಿಧ ಮುಖಂಡರು, ಅಧಿಕಾರಿಗಳು, ಮತ್ತು ಹಿರಿಯರು ಉಪಸ್ಥಿತರಿದ್ದರು.

# ನಾಡಿಗೆ ಗಣ್ಯಾತಿಗಣ್ಯರ ಕೊಡುಗೆ ನೀಡಿದ ಎಸ್. ಎಸ್. ಹೈಸ್ಕೂಲ್

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರದ ಎಸ್. ಎಸ್. ಹೈಸ್ಕೂಲ್ ಕ್ಯಾಂಪಸ್ ದೇಶ ನಾಡಿಗೆ ಗಣ್ಯಾತಿಗಣ್ಯರನ್ನು ಕೊಡುಗೆಯಾಗಿ ನೀಡಿದೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ನಿರ್ದೇಶಕ ಬಸನಗೌಡ ಎಂ. ಪಾಟೀಲ ತಿಳಿಸಿದ್ದಾರೆ.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಸಮನ್ವಯ ಇಂಗ್ಲಿಷ್ ಮೀಡಿಯಮ್ ಮತ್ತು ಎಸ್. ಎಸ್. ಪ್ರೈಮರಿ ಕನ್ನಡ ಮೀಡಿಯಂ ಶಾಲೆಯಲ್ಲಿ ಗುರುವಾರ ರಾತ್ರಿ ನಡೆದ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಅವರು ಸ್ಥಾಪಿಸಿದ ಬಿ.ಎಲ್.ಡಿ.ಇ ಸಂಸ್ಥೆ ಈಗ 114ನೇ ವರ್ಷ ಪೂರೈಸುತ್ತಿದೆ. ಈ ಸಂಸ್ಥೆಯ ಅಡಿಯಲ್ಲಿರುವ ಎಸ್. ಎಸ್. ಹೈಸ್ಕೂಲು ದೇಶಕ್ಕೆ ಉಪರಾಷ್ಟ್ರಪತಿಗಳಿಂದ ಹಿಡಿದು ಅನೇಕ ಜನ ಐಎಎಸ್ ಅಧಿಕಾರಿಗಳನ್ನು ಕೊಡುಗೆಯಾಗಿ ನೀಡಿದೆ. ಇಲ್ಲಿ ವಿದ್ಯಾಭ್ಯಾಸ ಮಾಡಿದ ಸಾವಿರಾರು ವಿದ್ಯಾರ್ಥಿಗಳು ನಾಡಿನಾದ್ಯಂತ ಮತ್ತು ದೇಶಾದ್ಯಂತ ಸರಕಾರಿ ಉನ್ನತ ಹುದ್ದೆಗಳಲ್ಲಿದ್ದಾರೆ. ಅಲ್ಲದೇ, ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿಯೂ ಉನ್ನತ ಸ್ಥಾನ ಗಳಿಸಿದ್ದಾರೆ ಎಂದು ಹೇಳಿದರು.



ಸಮನ್ವಯ ಶಾಲೆಯಲ್ಲಿ ಕಡಿಮೆ ಶುಲ್ಕ ಪಡೆದು ಅತ್ಯುತ್ತಮ ಶಿಕ್ಷಣ ನೀಡಲಾಗುತ್ತಿದೆ. 2017ರಲ್ಲಿ ಪ್ರಾರಂಭವಾದ ಶಾಲೆಯಲ್ಲಿ ಈಗ 1100 ವಿದ್ಯಾರ್ಥಿಗಳಿದ್ದಾರೆ. ರಾಜ್ಯದ ಇತರ ಶಾಲೆಗಳಿಗೆ ಮಾದರಿಯಾಗುವಂತೆ ಇಲ್ಲಿನ ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಸಂತಸ ತಂದಿದೆ. ಪ್ರತಿಯೊಬ್ಬರೂ ಪಠ್ಯದ ಜೊತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಸಂಸ್ಥೆ ಮತ್ತು ಶಿಕ್ಷಕರು ಇದಕ್ಕೆ ಅಗತ್ಯವಾದ ಎಲ್ಲ ಪ್ರೋತ್ಸಾಹ ನೀಡುತ್ತೇವೆ ಎಂದು ಅವರು ಹೇಳಿದರು.

ಬಿ.ಎಲ್.ಡಿ.ಇ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ಆರ್. ಬಿ. ಕೊಟ್ನಾಳ ಮಾತನಾಡಿ, ಶಾಲೆಯ ಮಕ್ಕಳ ಕಲಾ ಪ್ರದರ್ಶನ ಅತ್ಯುತ್ತಮವಾಗಿದೆ. ಶಾಲೆ ಉತ್ತರೋತ್ತರವಾಗಿ ಬೆಳೆಯಲು ಸಂಸ್ಥೆಯ ವತಿಯಿಂದ ಸಕಲ ಸಹಕಾರ ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಸಾಧನೆ ಕುರಿತು ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಅಲ್ಲದೇ, ನಾನಾ ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ಆಡಳಿತಾಧಿಕಾರಿ ಬಿ. ಆರ್. ಪಾಟೀಲ, ಎಸ್. ಎಸ್. ಕ್ಯಾಂಪಸ್ ಆಡಳಿತಾಧಿಕಾರಿ ಪ್ರೊ. ಐ. ಎಸ್. ಕಾಳಪ್ಪನವರ, ಸಂಸ್ಥೆಯ ಅಧೀಕ್ಷಕ ಎಸ್. ಎ. ಬಿರಾದಾರ(ಕನ್ನಾಳ ಗೌಡ್ರು), ಎಸ್.ಎಸ್.ಬಿ. ಹೈಸ್ಕೂಲ್ ಮುಖ್ಯ ಶಿಕ್ಷಕ ವಿ. ಬಿ. ಪಾಟೀಲ, ಸಹಾಯಕ ಶಿಕ್ಷಕಿ ವಿದ್ಯಾ ಎಸ್. ಬಿರಾದಾರ, ಜೆಎ[illegible]ಸ್ ಬಿ.ಎಡ್.ಕಾಲೇಜಿನ ಪ್ರಾಚಾರ್ಯೆ ಡಾ. ಬಿ. ವೈ. ಖಾಸನೀಸ, ಸಮನ್ವಯ ಇಂಗ್ಲಿಷ್ ಮೀಡಿಯಂ ಸ್ಕೂಲ್ ಮುಖ್ಯ ಶಿಕ್ಷಕ ಎಸ್. ಸಿ. ಬಿರಾದಾರ, ಶಾಲೆಯ ಪ್ರಧಾನ ಕಾರ್ಯದರ್ಶಿ ವಿಕಾಸ ಹಡಪದ ಮುಂತಾದವರು ಉಪಸ್ಥಿತರಿದ್ದರು.

ಆರ್. ಎಂ. ಪೋತದಾರ ಸ್ವಾಗತಿಸಿದರು. ವಿದ್ಯಾರ್ಥಿನಿ ಮೇಘಾ ಗಾಡಿವಡ್ಡರ ನಿರೂಪಿಸಿದರು.

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ್ ಕೋಸಂಬೆ ಸೂಚನೆ

# ಮಕ್ಕಳ ಹಕ್ಕುಗಳ ರಕ್ಷಣೆಗೆ ಸಮನ್ವಯದಿಂದ ಕಾರ್ಯ ನಿರ್ವಹಿಸಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ಮಕ್ಕಳ ಹಕ್ಕುಗಳ ಸಂರಕ್ಷಣೆಗೆ ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಗ್ರಾಮೀಣ ಮಟ್ಟದಲ್ಲಿ ಮಕ್ಕಳ ಕೇತ್ರದಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿ ಅನಿಷ್ಟ ಪದ್ಧತಿಗಳಾದ ಬಾಲ ಕಾರ್ಮಿಕ ಪದ್ಧತಿ, ಬಾಲ್ಯ ವಿವಾಹಗಳನ್ನು ತಡೆಯಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ್ ಕೋಸಂಬೆ ಅವರು ಎರಡನೇ ದಿವಸದ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಹಾಗೂ ವಿವಿಧ ಇಲಾಖೆಗಳ ಆಶ್ರಯದಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015 ಪೋಕ್ಸೋ ಕಾಯ್ದೆ-2012 ಬಾಲ್ಯವಿವಾಹ ನಿಷೇಧ ಕಾಯ್ದೆ-2006, ಆರ್.ಟಿ.ಇ ಕಾಯ್ದೆ-2009ರ ಕುರಿತು ಭಾಗೀದಾರ ಇಲಾಖೆಗಳ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಅಧಿಕಾರಿಗಳಿಗೆ ಹಮ್ಮಿಕೊಂಡ ಎರಡು ದಿನಗಳ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳ ಬಗ್ಗೆ ಕಳಕಳಿ ಹೊಂದಬೇಕು. ಅಂಗನವಾಡಿ, ಶಾಲೆ, ಗ್ರಾಮ ಪಂಚಾಯಿತಿ ತಾಲೂಕ ಪಂಚಾಯಿತಿ ಸೇರಿದಂತೆ ಮಕ್ಕಳ ಹಕ್ಕುಗಳ ಕಾಯ್ದೆಗಳ ಅನುಷ್ಠಾನಕ್ಕಾಗಿರುವ ಗ್ರಾಮ ಮಟ್ಟದಲ್ಲಿನ ಮಕ್ಕಳ ಸಮಿತಿಗಳು ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು. ಗ್ರಾಮ ಪಂಚಾಯತ್, ತಾಲೂಕು ಹಾಗೂ ಜಿಲ್ಲಾ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗಳು ಸಕಾಲದಲ್ಲಿ ನಿಮಿತವಾಗಿ ಜಾಗೃತಿ ಸಭೆಗಳನ್ನು ಜರುಗಿಸುವ ಮೂಲಕ ಬಾಲ್ಯವಿವಾಹ ನಿಷೇಧ, ಕಾರ್ಮಿಕ ಪದ್ಧತಿ ತಡೆಯಲೂ ಹಾಗೂ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಿ ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಶ್ರಮಿಸಬೇಕು ಎಂದರು.

ವಿವಿಧ ಇಲಾಖೆಗಳು ಮಕ್ಕಳ ಕ್ಷೇತ್ರದಲ್ಲಿ ತಮ್ಮಿಂದ ಸಾಧ್ಯವಾದಷ್ಟು ಉತ್ತಮವಾಗಿ ಕಾರ್ಯ ನಿರ್ವಹಿಸಬೇಕು. ಇದಕ್ಕೆ ಹಲವಾರು ಇಲಾಖೆಗಳು ಕೈ ಜೋಡಿಸಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.

ಜಿಲ್ಲಾಧಿಕಾರಿಗಳಾದ ಟಿ.ಭೂಬಾಲನ್ ಅವರು ಮಾತನಾಡಿ, ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಜಾಗೃತಿ ಮೂಡಿಸಬೇಕು. ಮಕ್ಕಳ ಹಕ್ಕುಗಳ ರಕ್ಷಣೆಗೆ 18 ಇಲಾಖೆಗಳ ಅಧಿಕಾರಿಗಳು ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಿ, ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ ತಡೆಯಬೇಕು.

ಗ್ರಾಮ ಮಟ್ಟದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮಾಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು. ಶಾಲಾ ಮುಖ್ಯೋಪಾಧ್ಯಾಯರು ಶಾಲೆಯಿಂದ ಹೊರಗುಳಿದ ಮಕ್ಕಳ ಕುರಿತಾಗಿ ಮಾಹಿತಿ ಸಂಗ್ರಹಿಸಬೇಕು. ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ಮರಳಿ ಶಾಲೆಗೆ ಕರೆ ತರಬೇಕು. ಶಿಕ್ಷಕರು ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಬೇಕು. ಶಿಕ್ಷಕರಾಗಿ ಪೋಷಕರಾಗಿ ಕಾರ್ಯನಿರ್ವಹಿಸಬೇಕು. ಒಂದು ವೇಳೆ ಪ್ರಕರಣಗಳು ಕಂಡು ಬಂದರೆ ಸಂಬಂಧಿಸಿದವರ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು. ಮಕ್ಕಳ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸಬೇಕು. ಮಕ್ಕಳ ರಕ್ಷಣೆಗೆ ಎಲ್ಲರೂ ಕಟಿಬದ್ಧರಾಗಿ ಕಾರ್ಯ ನಿರ್ವಹಿಸಬೇಕು ಎಂದರು.

ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ರಿಷಿ ಆನಂದ ಮಾತನಾಡಿ, ಈ ಕಾರ್ಯಾಗಾರ ಹಮ್ಮಿಕೊಂಡಿರುವ ಮುಖ್ಯ ಉದ್ದೇಶ ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸೇರಿದಂತೆ ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಜಾಗೃತಿ ಮೂಡಿಸುವುದು ಹಾಗೂ ಅನಿಷ್ಟ ಪದ್ಧತಿಗಳ ಪರಿಣಾಮಕಾರಿಯಾಗಿ ತಡೆಯಲು ಕಾನೂನುಗಳಲ್ಲಿರುವ ಅವಕಾಶಗಳ ಬಗ್ಗೆ ಮನವರಿಕೆ ಮಾಡಿಕೊಳ್ಳುವುದಾಗಿದೆ. ಈ ನಿಟ್ಟಿನಲ್ಲಿ ಕಾರ್ಯಾಗಾರದ ಸದುಪಯೋಗ ಪಡೆದುಕೊಂಡು ಮಕ್ಕಳ ಹಕ್ಕುಗಳ ರಕ್ಷಣೆಗೆ ಒತ್ತು ನೀಡಬೇಕು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಸದಸ್ಯರಾದ ರಾಘವೇಂದ್ರ ಎಚ್.ಸಿ ಮಾಹಿತಿ ನೀಡಿದರು.

# ಸಂವಿಧಾನದ ಪಾವಿತ್ರ್ಯತೆ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ :ಗಣಿ

ವಿಜಯಪುರ: ಸಂವಿಧಾನದ ಪಾವಿತ್ರ್ಯತೆ ರಕ್ಷಿಸುವುದು ಪ್ರತಿಯೊಬ್ಬ ಭಾರತೀಯರ ಕರ್ತವ್ಯ ಎಂದು ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರಿಕಾಂತ ಗಣಿ ಹೇಳಿದರು.

ಕೊಲ್ಹಾರ ತಾಲೂಕಿನ ಹಣಮಾಪುರ ಗ್ರಾಮದಲ್ಲಿ ಸರ್ಕಾರದ ವತಿಯಿಂದ ಹಮ್ಮಿಕೊಂಡ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನದ ಮುಖ್ಯ ಉದ್ದೇಶವೆಂದರೆ ಪ್ರತಿಯೊಬ್ಬ ನಾಗರಿಕರಿಗೆ ಸಮಾನ ಅವಕಾಶ ದೊರೆಯಬೇಕು. ಅದಕ್ಕೆ ಮೊದಲು ನಾವು ಸಂವಿಧಾನದ ಮಹತ್ವವನ್ನು ಎಲ್ಲರಿಗೂ ತಿಳಿಸಿಕೊಡುವುದು ಹಾಗೂ ಸಂವಿಧಾನದ ಆಶಯ ಕುರಿತು ಜಾಗೃತಿ ಮೂಡಿಸುವುದಾಗಿದೆ ಎಂದರು.

ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು, ಯುವಕರು, ಸೇರಿದಂತೆ ಸಾವಿರಾರು ಜನರು ಸಂವಿಧಾನ ಜಾಗೃತಿ ಜಾಥಾದ ಸ್ತಬ್ಧಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಬಳಿಕ ಮುಖ್ಯ ರಸ್ತೆಯಿಂದ ಮೆರವಣಿಗೆದೊಂದಿಗೆ ಅದ್ದೂರಿಯಾಗಿ ಸ್ವಾಗತಿಸಿದರು. ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಹಿಳೆಯರಿಂದ ಕುಂಭಮೇಳ, ಡೊಳ್ಳು ಕುಣಿತ ಮೆರವಣಿಗೆ ಕಳೆ ತಂದುಕೊಟ್ಟಿತು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಸಂವಿಧಾನ ಪೀಠಿಕೆ ಓದುವುದರ ಮೂಲಕ ಪ್ರಮಾಣ ಮಾಡಲಾಯಿತು.

ಕೊಲ್ಹಾರ್ ತಾಲೂಕಿನ ಹಣಮಾಪುರ, ಸಿದ್ದನಾಥ ಆರ್.ಸಿ, ಅರಷಣಗಿ, ತೆಲಗಿ, ಕೂಡಗಿ, ಗ್ರಾಮಗಳಲ್ಲಿ ಸ್ಥಬ್ದಚಿತ್ರ ಜಾಥಾ ವಾಹನ ಸಂಚರಿಸಿ ಸಂವಿಧಾನ ಕುರಿತು ಜಾಗೃತಿ ಮೂಡಿಸಿತು.

ಈ ಸಂದರ್ಭದಲ್ಲಿ ಪಿಡಿಓ ಐ.ಡಿ.ಬಡಿಗೇರ, ಎಸ್‌ಡಿಎಂಸಿ ಅಧ್ಯಕ್ಷ ಸಂಗಪ್ಪಾ ಮಾದರ, ತಹಶಿಲ್ದಾರ ಎಸ್. ಎಸ್. ನಾಯ್ಕಲಮಠ, ನೋಡಲ್ ಅಧಿಕಾರಿ ವಿಲಾಸ ರಾಠೋಡ, ಸಮಾಜ ಕಲ್ಯಾಣ ಅದಿಕಾರಿ ಬವಾನಿ ಪಾಟೀಲ್, ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕರಾದ ಅಧಿಕಾರಿಗಳು ಉಪಸ್ಥಿತರಿದ್ದರು.



# ಪ್ರಮೋದ ಮಧ್ವರಾಜಗೆ ಲೋಕಸಭಾ ಟಿಕೆಟ್ ನೀಡಲು ಆಗ್ರಹ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಮಾಜಿಸಚಿವ, ಕೋಲಿ ಕಬ್ಬಲಿಗ ಸಮುದಾಯದ ಮುಖಂಡ ಪ್ರಮೋದ ಮಧ್ವರಾಜ್ ಇವರಿಗೆ ಉಡುಪಿ-ಚಿಕ್ಕಮಗಳೂರು ಮತಕ್ಷೇತ್ರದಿಂದ ಲೋಕಸಭಾ ಟಿಕೆಟ್ ನೀಡುವಂತೆ ಕೋಲಿ ಕಬ್ಬಲಿಗ ಯುವವೇದಿಕೆ ರಾಜ್ಯಾಧ್ಯಕ್ಷ ಶಿವಾಜಿ ಮೆಟಗಾರ ಬಿಜೆಪಿ ನಾಯಕರನ್ನು ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಶುಕ್ರವಾರ ಪತ್ರಿಕೆಯೊಂದಿಗೆ ಮಾತನಾಡಿದ ಶಿವಾಜಿ, ಪ್ರಮೋದ ಮಧ್ವರಾಜ್ ಹಲವು ವರ್ಷಗಳ ಹಿಂದೆ ಕಾಂಗ್ರೆಸ್ ತೊರೆದು ಯಾವುದೇ ಬೇಡಿಕೆಯನ್ನಿಡದೆ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಮೆಚ್ಚಿ ಬಿಜೆಪಿ ಸೇರಿದ್ದಾರೆ. ಕರಾವಳಿ



ಭಾಗದ ರಾಜಕೀಯ ವಲಯದಲ್ಲಿ ಇವರ ತಂದೆ ಶಾಸಕರು, ಇವರ ತಾಯಿ ಶಾಸಕರು, ಸಚಿವರಾಗಿದ್ದರು, ಇವರು ಸಹ ಶಾಸಕರಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಕಾಂಗ್ರೆಸ್ ತೊರೆದು ಯಾವುದೇ ಷರತ್ತು ಇಲ್ಲದೆ ಬಿಜೆಪಿಗೆ ಬಂದಿರುವ ಪ್ರಮೋದ ಮಧ್ವರಾಜ್ ಕೋಲಿ, ಕಬ್ಬಲಿಗ, ಅಂಬಿಗ ಸಮುದಾಯದ ರಾಜ್ಯ ಪ್ರಮುಖರಾಗಿದ್ದಾರೆ. ಇಡೀ ರಾಜ್ಯಾದ್ಯಂತ ಸುಮಾರು 50ಲಕ್ಷ ಕೋಲಿ ಕಬ್ಬಲಿಗ ಮತದಾರರಿದ್ದು, ಇವರಿಗೆ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನೀಡುವುದರಿಂದ ಬಿಜೆಪಿಗೆ ಹೆಚ್ಚಿನ ಅನುಕೂಲವಾಗಲಿದೆ. ಜೊತೆಗೆ ನಮ್ಮ ಸಮುದಾಯವು ಸಹ ಬಿಜೆಪಿಯನ್ನು ಬೆಂಬಲಿಸಲಿದೆ. ಆದ್ದರಿಂದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ಅವಕಾಶ ನೀಡುವುದರ ಮೂಲಕ ಹಿಂದುಳಿದ ಸಮುದಾಯಕ್ಕೆ ನ್ಯಾಯ ಕಲ್ಪಿಸಬೇಕು ಎಂದು ತಿಳಿಸಿದ್ದಾರೆ.

# ನಿಡಗುಂದಿ: ಪಿಯುಸಿ ವಿದ್ಯಾರ್ಥಿಗಳಿಂದ ಗುರುನಮನ



**ಉದಯರಶ್ಮಿ ನ್ಯೂಸ್**

ನಿಡಗುಂದಿ: ಪಟ್ಟಣದ ಗ್ರಾಮೀಣ ವಿದ್ಯಾವರ್ಧಕ ಸಂಘದ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ 2001-02 ನೇ ಸಾಲಿನಲ್ಲಿ ಪಿಯುಸಿ ಕಲಿತ ವಿದ್ಯಾರ್ಥಿಗಳ ಗುರುನಮನ ಕಾರ್ಯಕ್ರಮ ಜರುಗಿತು.

ಕಪ್ಪು ಪ್ಯಾಂಟ್ ಶ್ವೇತವರ್ಣದ ಶರ್ಟ್, ಹೆಗಲ ಮೇಲೆ ಶೆಲ್ಲೆ ತಲೆಯ ಮೇಲೆ ಖಾದಿ ಟೋಪಿ ವಿದ್ಯಾರ್ಥಿಗಳು ಧರಿಸಿದರೆ, ಒಂದೇ ಬಣ್ಣದ ಕಾಟನ್ ಸಾರಿ ಗಳನ್ನು ಧರಿಸಿ ಕಲರ್ ಫುಲ್ ಕನ್ನಡಕಗಳನ್ನು ಮಹಿಳೆಯರು ಧರಿಸಿದ್ದರು. ಕಾಲೇಜಿನ ಮಹಾ ದ್ವಾರವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು ಮಹದ್ವಾರದಿಂದ ಹಿಡಿದು ಸಭಾಂಗಣದವರಿಗೆ ಹೂಗಳಿಂದ ಪಥವನ್ನು ಸಿದ್ಧಪಡಿಸಲಾಗಿತ್ತು. ಅದೇ ಪಥದಲ್ಲಿ ತಮಗೆ ಕಲಿಸಿದ ಶಿಕ್ಷಕರ ಆಗಮನದ ವೇಳೆ ಎಲ್ಲಾ ಹಳೆ ವಿದ್ಯಾರ್ಥಿಗಳು ಪುಷ್ಪಾರ್ಚನೆಗೈದು ಸ್ವಾಗತ ಕೋರಿದರು. ಪರಿಸರ ಸ್ನೇಹಿ ಸಿಡಿ ಮದ್ದುಗಳನ್ನು ಬಳಸಲಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಸಿದ್ದಣ್ಣ ನಾಗಠಾಣ, ನಮ್ಮ ತಂದೆ ಎಸ್.ಜಿ. ನಾಗಠಾಣ ಅವರ ದೂರದೃಷ್ಟಿತ್ವ ಹಾಗೂ ಕಾರ್ಯತತ್ಪರತೆಯ ಕಾರಣ ಗ್ರಾಮೀಣ ಮಕ್ಕಳಿಗೆ ಉನ್ನತ ಶಿಕ್ಷಣ ದೊರೆಯುವಂತಾಯಿತು ಎಂದರು.

ಶಾಲೆಯ ಹಲವು ಹಳೆ ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ಸಂಘಟಿಸಿದ ಬಗ್ಗೆ, ಕಾಲೇಜಿನ ಉಪನ್ಯಾಸಕರ ಕೊಡುಗೆ, ಪಾಠದ ಶೈಲಿಯನ್ನು ಸ್ಮರಿಸಿದರು.

ಕಾಲೇಜಿನ ಪ್ರಾಚಾರ್ಯ ಎಲ್.ಟಿ. ಚವ್ಹಾಣ, ನಿವೃತ್ತ ಪ್ರಾಚಾರ್ಯ ಎಸ್ ಎಸ್ ಹೊಸಮನಿ, ಎನ್ ಡಿ ಮಿರಜಕರ, ಎಂ ಎನ್ ಬಕಾಟೆ, ಎಂ ಬಿ ಚಿನಿವಾರ, ತಮ್ಮ ಅನುಭವ ಹಾಗೂ ವಿದ್ಯಾರ್ಥಿಗಳಿಗೆ ಜೀವನದ ಬದುಕುವ ಮೌಲ್ಯಗಳ ಬಗ್ಗೆ ವಿವರಿಸಿ ರಾಜ್ಯ ಪ್ರಶಸ್ತಿಗಿಂತಲೂ ಮಿಗಿಲಾದ ಕೊಡುಗೆಯನ್ನು ತಾವು ನೀಡಿದ್ದೀರಿ ಎಂದು ಭಾವಪರವಶರಾಗಿ ಎಂದರು. ಉಪನ್ಯಾಸಕರ ಕಣ್ಣಾಲಿಗಳನ್ನು ಕಂಡು ಹಳೆ ವಿದ್ಯಾರ್ಥಿಗಳೆಲ್ಲಾ ಕಣ್ಣೀರ ಕಡಲಲ್ಲಿ ಹರಿಸುವಂತೆ ಮಾಡಿತು.

ಉಪನ್ಯಾಸಕರಾದ ಎಂ ಎ ಮೈದರ್ಗಿ, ಎಂ.ಎಸ್. ಭಾವಿಕಟ್ಟಿ, ಜಗದೀಶ ವಾರಿ, ಮನೋಹರ ಬಡಿಗೇರ, ಟಿ ಎಂ ರಾಠೋಡ್, ಬೋಧಕೇತರ ಸಿಬ್ಬಂದಿಗಳಾದ ಬಸವರಾಜ ಬಿರಾದಾರ, ಮಲ್ಲಯ್ಯ ಸಾಲಿಮಠ, ಆರ್.ಎ. ಚಪ್ಪರಬಂದ್, ಶೇಖರಯ್ಯ ವಿಭೂತಿ, ಯಮನಪ್ಪ ಅದವಾನಿ ಪಾಲ್ಗೊಂಡಿದ್ದರು. ಎಲ್ಲಾ ಗುರುಗಳನ್ನು ಸನ್ಮಾನಿಸಲಾಯಿತು.

ಹಳೆ ವಿದ್ಯಾರ್ಥಿಗಳಾದ ಎಂ. ಎಚ್. ಲಷ್ಕರಿ, ಶ್ರೀನಾಥ್ ಬಣ್ಣದ, ಮೇಲಿನಮನಿ ,ವಿನೋದ್ ಬಿರಾದಾರ್ ,ಗಣೇಶ್ ಹಳಮನಿ ,ರಾಘವೇಂದ್ರ ವಡವಡಗಿ ,ನೀಲಾಂಬಿಕಾ ಹಾವೇರಿ ,ಸುಮಲತಾ ಕೂಚಬಾಳ, ರಾಜೇಶ್ವರಿ ಗೋಡ್ಯಾಳ ಇತರರು ಇದ್ದರು.

### ಎಂಎಲ್ಸಿ ಸುನೀಲಗೌಡ ಪಾಟೀಲ ಅವರಿಂದ ಕೇಂದ್ರ ರೇಲ್ವೆ ಸಚಿವ ಅಶ್ವಿನಿ ವೈಷ್ಣವ ಅವರಿಗೆ ಪತ್ರ

# ವಂದೇ ಭಾರತ ರೈಲು ಸೇವೆ ವಿಜಯಪುರವರೆಗೆ ವಿಸ್ತರಿಸಲು ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ: ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ ಪ್ರಾರಂಭಿಸಲಾಗಿರುವ ವಂದೇ ಭಾರತ ರೈಲು ಸೇವೆಯನ್ನು ವಿಜಯಪುರದಿಂದ ಬಾಗಲಕೋಟೆ ಮಾರ್ಗವಾಗಿ ಬೆಂಗಳೂರಿಗೆ ಮತ್ತು ಮುಂಬೈ– ಸೋಲಾಪುರ ರೈಲನ್ನು ವಿಜಯಪುರದ ವರೆಗೆ ವಿಸ್ತರಿಸುವಂತೆ ಆಗ್ರಹಿಸಿ ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅವರು ಕೇಂದ್ರ ರೇಲ್ವೆ ಸಚಿವ ಅಶ್ವಿನಿ ವೈಷ್ಣವ ಅವರಿಗೆ ಪತ್ರ ಬರೆದಿದ್ದಾರೆ.

ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಜನತೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸಲು ಹೆಚ್ಚುವರಿಯಾಗಿ ರೈಲುಗಳನ್ನು ಓಡಿಸುವುದರ ಜೊತೆಗೆ ರೈಲಿನಲ್ಲಿ ಸ್ವಚ್ಛತೆ ಸೇರಿದಂತೆ ನಾನಾ ರೀತಿಯ ಆಧುನಿಕ ಸೌಲಭ್ಯಗಳನ್ನು ಒದಗಿಸಿರುವುದು ಸಂತಸದ ಸಂಗತಿಯಾಗಿದೆ.

ವಿಜಯಪುರದಿಂದ ಬಾಗಲಕೋಟೆ ಮಾರ್ಗವಾಗಿ ಬೆಂಗಳೂರಿಗೆ ಹೋಗಲು ರೈಲು ಸೇವೆ ಇದ್ದರೂ ಈ ರೈಲುಗಳ ಸಂಚಾರದ ಸಮಯ ಅನುಕೂಲವಾಗಿಲ್ಲ. ಅಲ್ಲದೇ, ಈ ರೈಲುಗಳು ಸರಿಯಾದ ಸಮಯಕ್ಕೆ ನಿಗದಿತ ಸ್ಥಳಗಳನ್ನು ತಲುಪುತ್ತಿಲ್ಲ. ಇದರಿಂದ ಕೆಲಸ ಕಾರ್ಯಗಳಿಗಾಗಿ ಮತ್ತು ದಿನನಿತ್ಯದ ವ್ಯವಹಾರ ಸಂಬಂಧಿ ಕೆಲಸಗಳಿಗಾಗಿ ಹಾಗೂ ಸರಕಾರಿ ಕಚೇರಿ ಕೆಲಸಗಳಿಗಾಗಿ ಬೆಂಗಳೂರಿಗೆ ಹೋಗಿ– ಬರುವ ಜನರಿಗೆ ತೊಂದರೆಯಾಗಿದೆ. ಅಲ್ಲದೇ, ಬೆಂಗಳೂರಿನಿಂದ ವಿಜಯಪುರಕ್ಕೆ ಬರುವ ರೈಲುಗಳ ಸಂಚಾರ ಸಮಯವೂ ಸಹ ಹೆಚ್ಚಾಗಿದೆ. ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಂದ ಸಾಕಷ್ಟು ಜನ ಯುವಕರು ಉದ್ಯೋಗ ಅರಸಿ ಬೆಂಗಳೂರಿನಲ್ಲಿ ನೆಲಸಿರುತ್ತಾರೆ. ಹಬ್ಬಗಳು ಮತ್ತು ಸಾಲುಸಾಲು ರಜೆಗಳ ಬಂದಂಥ ಸಂದರ್ಭಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವುದರಿಂದ ಕೆಲವು ಖಾಸಗಿ ಸಾರಿಗೆ ಸಂಸ್ಥೆಗಳು ಪ್ರಯಾಣ ದರವನ್ನು ಎರಡರಿಂದ ಮೂರು ಪಟ್ಟು ಹೆಚ್ಚಳ ಮಾಡುತ್ತಾರೆ. ಇದರಿಂದ ಬೆಂಗಳೂರಿನಲ್ಲಿ ಕೆಲಸ ಮಾಡುವ ಯುವಕರು, ಕಾರ್ಮಿಕರು ಮತ್ತು ಇತರೆ ಸಾರ್ವಜನಿಕರಿಗೆ ತುಂಬಾ ಹೊರೆಯಾಗುತ್ತದೆ. ಜೊತೆಗೆ ಜನರ ಹಬ್ಬದ ಸಂಭ್ರಮದ ಮೇಲೆ ಪರಿಣಾಮ ಬೀರುತ್ತದೆ ಎಂದು ಅವರು ತಿಳಿಸಿದ್ದಾರೆ.

ಹೀಗಾಗಿ ವಿಜಯಪುರದಿಂದ ಪ್ರತಿದಿನ ರಾತ್ರಿ 9 ಗಂಟೆಗೆ ರೈಲು



ಸಂಚಾರ ಪ್ರಾರಂಭಿಸಿ ಮರುದಿನ ಬೆಳಿಗ್ಗೆ 6 ಗಂಟೆಗೆ ಬೆಂಗಳೂರು ತಲುಪುವಂತಾಗಬೇಕು. ಅದೇ ರೀತಿ ಬೆಂಗಳೂರಿನಿಂದಲೂ ಪ್ರತಿದಿನ ರಾತ್ರಿ 9 ಗಂಟೆಗೆ ರೈಲು ಹೊರಟು ಮರುದಿನ ಬೆಳಿಗ್ಗೆ 6 ಗಂಟೆಗೆ ವಿಜಯಪುರ ತಲುಪುವ ವ್ಯವಸ್ಥೆ ಮಾಡಬೇಕು. ವಿಜಯಪುರ ಜಿಲ್ಲೆ ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿದ್ದು, ಮುಂಬೈ ಮತ್ತು ಕರ್ನಾಟಕಕ್ಕೆ ಮಧ್ಯೆ ಸುಮಾರು 500 ವರ್ಷಗಳಿಂದಲೂ ಅವಿನಾಭಾವ ಸಂಬಂಧವಿದೆ. ಭಾವನಾತ್ಮಕವಾಗಿ ವಿಜಯಪುರ ಜಿಲ್ಲೆಯ ಜನರು ಮುಂಬೈ ಮತ್ತು ಸೋಲಾಪೂರ ಜನರೊಂದಿಗೆ ಬಾಂಧವ್ಯವನ್ನು ಬೆಸೆದುಕೊಂಡಿದ್ದಾರೆ. ಗಡಿ ಭಾಗದ ಜನರು ಮುಂಬೈ ಮತ್ತು ಸೋಲಾಪೂರ ಪಟ್ಟಣಗಳಿಗೆ ಉದ್ಯೋಗ ಹಾಗೂ ವ್ಯಾಪಾರ ವಹಿವಾಟುಗಳಿಗಾಗಿ ಸಂಚರಿಸುತ್ತಾರೆ. ಈ ಭಾಗದ ರೈತರು ಬೆಳೆದಿರುವ ಉತ್ಪನ್ನಗಳನ್ನೂ ಸಾಗಿಸುತ್ತಾರೆ. ಜನರ ವಹಿವಾಟುಗಳು ಸಾಕಷ್ಟು ಸಂಖ್ಯೆಯಲ್ಲಿ ಇರುವುದರಿಂದ ಮುಂಬೈ– ಸೋಲಾಪೂರ ನಡುವೆ ಸಂಚರಿಸುವ ಒಂದೇ ಭಾರತ ರೈಲನ್ನು ವಿಜಯಪುರದವರೆಗೂ ವಿಸ್ತರಿಸಿದರೆ ಈ ಭಾಗದ ರೈತರಿಗೆ, ಉದ್ಯಮಿಗಳಿಗೆ, ವ್ಯಾಪಾರ ವಹಿವಾಟುದಾರರಿಗೆ ಮತ್ತು ಉದ್ಯೋಗಸ್ಥರಿಗೆ ಬಹಳಷ್ಟು ಅನಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಂಬೈ– ಸೋಲಾಪೂರ ವರೆಗೆ ಸಂಚರಿಸುವ ವಂದೇ ಭಾರತ ರೈಲನ್ನು ವಿಜಯಪುರ ವರೆಗೆ ಓಡಿಸಲು ಆದೇಶ ಹೊರಡಿಸಬೇಕು.

ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳು ಹಲವಾರು ಪ್ರಾಚೀನ ಸ್ಮಾರಕಗಳನ್ನು ಹೊಂದಿರುವ ಜಿಲ್ಲೆಗಳಾಗಿವೆ. ಅಲ್ಲದೇ, ದೇಶ–ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ವಿಜಯಪುರ ನಗರ, ಆಲಮಟ್ಟಿ, ಕೂಡಲ ಸಂಗಮ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ ಸೇರಿದಂತೆ ಅನೇಕ ಪ್ರವಾಸಿ ತಾಣಗಳಿಗೆ ಪ್ರತಿದಿನ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಅಲ್ಲದೇ, ಈ ಭಾಗದಲ್ಲಿ ದ್ರಾಕ್ಷಿ, ದಾಳಿಂಬೆ, ಸಪೋಟಾ, ಬಾರೆಹಣ್ಣು ಮುಂತಾದ ಉತ್ಕೃಷ್ಟ ಗುಣಮಟ್ಟದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತದೆ. ಉತ್ತಮ ಗುಣಮಟ್ಟದ ಜೋಳವನ್ನೂ ಇಲ್ಲಿನ ರೈತರು ಬೆಳೆಯುತ್ತಿದ್ದಾರೆ. ಅಲ್ಲದೇ, ಇತ್ತೀಚೆಗೆ ರೇಷ್ಮೆ ಕೃಷಿಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಅಲ್ಲದೇ, ಕೂಡಗಿ ಎನ್.ಟಿ.ಪಿ.ಸಿ ಯಲ್ಲಿಯೂ ಸಹ ಸಾವಿರಾರು ಜನರು ಕೆಲಸ ಮಾಡುತ್ತಿದ್ದು, ವಂದೇ ಭಾರತ ರೈಲು ಸೇವೆ ಪ್ರಾರಂಭಿಸುವುದರಿಂದ ಈ ಭಾಗದ ಎಲ್ಲ ರೈತರು, ಜನಸಾಮಾನ್ಯರು, ಅಧಿಕಾರಿಗಳು, ಕಾರ್ಮಿಕರು ಬೆಂಗಳೂರಿಗೆ ಪ್ರಯಾಣಿಸಲು ವರದಾನವಾಗಲಿದೆ.

ಈ ಹಿನ್ನೆಲೆಯಲ್ಲಿ ರೈಲ್ವೆ ಸಚಿವರಾದ ತಾವು ವಿಜಯಪುರ– ಬಾಗಲಕೋಟೆ– ಬೆಂಗಳೂರು ಮಧ್ಯೆ ವಂದೇ ಭಾರತ ರೈಲು ಸೇವೆಯನ್ನು ಪ್ರಾರಂಭಿಸಬೇಕು. ಅಲ್ಲದೇ, ಮುಂಬೈ– ಸೋಲಾಪೂರ ಮಧ್ಯೆ ಸಂಚರಿಸುವ ವಂದೇ ಭಾರತ ರೈಲು ಸೇವೆಯನ್ನು ವಿಜಯಪುರ ವರೆಗೆ ವಿಸ್ತರಿಸಲು ಕ್ರಮ ಕೈಗೊಳ್ಳಬೇಕು ಎಂದು ವಿನಂತಿಸುತ್ತಿರುವುದಾಗಿ ಸುನೀಲಗೌಡ ಪಾಟೀಲ ಅವರು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

## ಸೂಕ್ಷ್ಮ ನೀರಾವರಿ ಘಟಕಗಳ ಉಪಯೋಗ :ತರಬೇತಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾ ಕೃಷಿ ತರಬೇತಿ ಕೇಂದ್ರ ವತಿಯಿಂದ ದೇವರ ಹಿಪ್ಪರಗಿ ತಾಲೂಕಿನ ರೈತರಿಗೆ ಫೆ.12 ಮತ್ತು 13ರಂದು ಎರಡು ದಿನಗಳ ಕಾಲ ಸೂಕ್ಷ್ಮ ನೀರಾವರಿ ಘಟಕಗಳ ಉಪಯೋಗಗಳು ಮತ್ತು ನಿರ್ವಹಣೆ ವಿಷಯದ ಕುರಿತು ತರಬೇತಿ ಕಾರ್ಯಕ್ರಮ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಆಯೋಜಿಸಿದೆ.

ಆಸಕ್ತ ರೈತರು ಭಾಗವಹಿಸಿ ತರಬೇತಿಯ ಸಂಪೂರ್ಣ ಮಾಹಿತಿ ಪಡೆಯುವಂತೆಯೂ, ಹೆಚ್ಚಿನ ಮಾಹಿತಿಗಾಗಿ ಕೃಷಿ ಅಧಿಕಾರಿ ಶ್ರೀಮತಿ ಫಾತೀಮಾ ಬಾನು ಸುತಾರ್ (9886134310) ಅವರನ್ನು ಸಂಪರ್ಕಿಸಬಹುದು ಎಂದು ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.11ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

**ಉದಯರಶ್ಮಿ ನ್ಯೂಸ್**

ವಿಜಯಪುರ: ವಿಜಯಪುರದ 110/11ಕೆವ್ಹಿ ವಿದ್ಯುತ್ ವಿತರಣ ಕೇಂದ್ರದಲ್ಲಿ 11ಕೆವಿ ಮಾರ್ಗದ ನಿರ್ವಹಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಪುಲಕೇಶಿ ಮತ್ತು ಇಂದಿರಾ ನಗರ 11ಕೆವಿ ವಿದ್ಯುತ್ ಮಾರ್ಗಗಳಲ್ಲಿ ಬರುವ ಜಿಲ್ಲಾ ಪಂಚಾಯತ್ ಕಚೇರಿ, ಹೊಸ ತಹಶಿಲ್ದಾರ್ ಕಚೇರಿ, ಜುಮ್ಮಾ ಮಸೀದಿ ಹಿಂದುಗಡೆ, ಕೆ.ಎಚ್.ಬಿ. ಕಾಲೋನಿ, ಶೆಡಜಿ ಮೊಹಲ್ಲ, ಹಕೀಮ್ ಚೌಕ, ಜಾಡರಗಲ್ಲಿ, ಮುಧೋಳ ಆಸ್ಪತ್ರೆ, ಶಾಂತಿ ನಗರ, ಕಸ್ತೂರಿ ಕಾಲೋನಿ, ರೈಲ್ವೇ ಸ್ಟೇಶನ್, ಪರ್ಲ ಹೋಟೆಲ, ಬೆಂಡಿಗೇರಿ ಓಣಿ, ದಿವಟಗೇರಿ ಗಲ್ಲಿ, ಹಾಷಿಮ್ ಪೀರ್ ದರ್ಗಾ ಹತ್ತಿರದ ಪ್ರದೇಶಗಳಲ್ಲಿ ಫೆ.11ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸಬೇಕೆಂದು ವಿಜಯಪುರ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕೋರವಾರದಲ್ಲಿ ಶಿಕ್ಷಣ ಕ್ಷೇತ್ರದ ಸಾಧಕರಿಗೆ ಮಕ್ಕಳಮಿತ್ರ ಪ್ರಶಸ್ತಿ ಪ್ರಧಾನ

# ಮಕ್ಕಳ ಸೇವೆ ದೇವರ ಸೇವೆಗೆ ಸಮಾನ :ಹ.ಮ.ಪೂಜಾರ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಮಕ್ಕಳು ದೇವರ ಸಮಾನ ಅವರ ಸೇವೆ ಮಾಡಿದರೆ ದೇವರ ಸೇವೆ ಮಾಡಿದಂತೆ ಎಂದು ಮಕ್ಕಳ ಸಾಹಿತಿ, ಚಿಂತಕ ಹ.ಮ.ಪೂಜಾರ ಹೇಳಿದರು.

ತಾಲ್ಲೂಕಿನ ಕೋರವಾರ ಗ್ರಾಮದ ಸರಕಾರಿ ಕನ್ನಡ ಗಂಡು ಮಕ್ಕಳ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶುಕ್ರವಾರ ಉಜ್ವಲ ಗ್ರಾಮೀಣಭಿವೃದ್ಧಿ ಸೇವಾಸಂಸ್ಥೆ, ಇಂಡಿಯಾ ಲಿಟ್ರಸಿ ಪ್ರೋಜೆಕ್ಟ್ "ಶಿಕ್ಷಣಯಾತ್ರೆ" ಯೋಜನೆ ಹಾಗೂ ಜಿಲ್ಲಾ ಆಡಳಿತ ಸಹಯೋಗದೊಂದಿಗೆ ಜರುಗಿದ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳಲ್ಲಿ ಕ್ರಿಯಾಶೀಲತೆ ಅಡಗಿದೆ ಅದನ್ನು ಹೊರ ತರುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯ. ಮಕ್ಕಳ ಅಭಿವೃದ್ಧಿಗಾಗಿ ಗ್ರಂಥಾಲಯ, ಶಿಕ್ಷಣ, ಮಕ್ಕಳ ಹಕ್ಕುಗಳು ಬಹಳ ಅಗತ್ಯ ಎಂದರು.

ಉಜ್ವಲ ಸಂಸ್ಥೆಯ ಅಧ್ಯಕ್ಷೆ ಗೌರಮ್ಮ ರೆಡ್ಡಿ ಮಾತನಾಡಿ, ಮಕ್ಕಳು ಎಂದರೆ ನಗು, ಹಬ್ಬ,



ಯಾವ ಗ್ರಾಮ ಮತ್ತು ಪಟ್ಟಣದಲ್ಲಿ ಮಕ್ಕಳ ಪರ ಚಿಂತಕರು ಇರುತ್ತಾರೆಯೋ ಅದು ಸ್ವರ್ಗವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಶಿಶು ಅಭಿವೃದ್ಧಿ ಸಹಾಯಕ ಯೋಜನಾಧಿಕಾರಿ ಎಸ್.ಎ.ಕೋರವಾರ, ಯಶೋಧಾ ಜೋಷಿ ಉಜ್ವಲ ಸಂಸ್ಥೆಯ–ಐಎಲ್‌ಪಿ ಯೋಜನೆ ನಿರ್ದೇಶಕ ವಾಸುದೇವ ತೋಳಬಂದಿ, ಶಿಕ್ಷಣ ಇಲಾಖೆ ಬಿಆರ್‌ಪಿ ಶ್ರೀದೇವಿ ರೆಬಿನಾಳ ಮಾತನಾಡಿದರು.

ಮಕ್ಕಳ ಕ್ಷೇತ್ರದಲ್ಲಿ ಸಾಧನೆ ಮಾಡಿದ ಜಾಲವಾದ ಕರ್ನಾಟಕ ಪಬ್ಲಿಕ್ ಪ್ರೌಡಶಾಲೆಯ ಮುಸ್ತಾಫ್ ಕುಡಚಿ, ಕಡಕೋಳ ಶಾಲೆಯ ರಘು ಎಸ್, ಯಾಳವಾರ ಶಾಲೆಯ ಸಹಶಿಕ್ಷಕಿ ಜ್ಯೋತಿ ಮೇತ್ರಿ, ಜಾಲವಾದ ಗ್ರಾಮದ ಸಹಶಿಕ್ಷಕಿ ತಸ್ಲೀಮಾ ಆಯಿಶಾ, ಅಂಗನವಾಡಿ ಕಾರ್ಯಕರ್ತೆಯರಾದ ಶಾಂತಾಬಾಯಿ ಚಿಗರಿ(ಮಣೂರ) ಮಧುಮತಿ ಕಮತಗಿ(ಪಡಗಾನೂರ), ಪ್ರೇಮಾ ಕುಳೇಕುಮಟಗಿ (ಕೋರವಾರ) ಇವರಿಗೆ ಮಕ್ಕಳಮಿತ್ರ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಎಸ್‌ಡಿಎಮ್‌ಸಿ ಅಧ್ಯಕ್ಷ ಸೋಮಶೇಖರ ಹಿರೇಮಠ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶೈನಾಜೀಬಿ ಬ್ಯಾಕೋಡ, ಉಪಾಧ್ಯಕ್ಷ ಮಹಾದೇವಪ್ಪ ರಾಮನಳ್ಳಿ, ಉಜ್ವಲ ಸಂಸ್ಥೆಯ ಯೋಜನಾ ನಿರ್ದೇಶಕಿ ಸುನಂದಾ ತೋಳಬಂದಿ, ಗ್ರಾಮ ಪಂಚಾಯಿತಿ ಸದಸ್ಯರಾದ ರಾಜಶೇಖರ ಛಾಯಗೋಳ, ಬಸನಗೌಡ ಬಿರಾದಾರ, ಯಾಶೀನ್ ವಡಗೇರಿ, ಹಣಮಂತ ದೊಡ್ಡಮನಿ, ದಯಾನಂದ ಗುತ್ತರಗಿಮಠ, ಶರಣಗೌಡ ನಾಯ್ಕಲ್, ಮುತ್ತು ರಾಠೋಡ್, ಅರವಿಂದ ರಾಠೋಡ, ಭೀಮಪ್ಪ ಮೋಪಗಾರ, ಆಯೂಬ್ ತುರಕನಗೇರಿ, ಗ್ರಾಮದ ಪ್ರಮುಖರಾದ ರಾಜಶೇಖರಗೌಡ ಪೋ.ಪಾಟೀಲ, ರಾಘವೇಂದ್ರ ಜೋಶಿ, ವೈದ್ಯಾಧಿಕಾರಿ ಸಿದ್ದಪ್ಪ ಚಿರ್ಚಿನಕಲ್ಲ, ಸಂಸ್ಥೆಯ ಸಂಯೋಜಕ ಸಾಗರ ಘಾಟಗೆ, ಭೀಮಬಾಯಿ ಹೇರೂರ, ಮಲ್ಲಮ್ಮ ಹೊನ್ನಳ್ಳಿ , ಶಶಿಕಾಂತ ಸುಂಗಠಾಣ, ಭಾಗಣ್ಣ ಹಾಳಕಿ, ಶ್ರೀಶೈಲ ಜೋಗೂರ ಇದ್ದರು.

## ಫೆ.12 ರಂದು ವಿದ್ಯಾಜ್ಯೋತಿ ಪಬ್ಲಿಕ್ ಶಾಲೆ ವಾರ್ಷಿಕೋತ್ಸವ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ಮಾರುತಿ ನಗರದ ಯಲ್ಲಾಲಿಂಗ ದೇವಸ್ಥಾನದ ಬಳಿಯ ವಿದ್ಯಾಜ್ಯೋತಿ ಪಬ್ಲಿಕ್ ಶಾಲೆಯ ಎರಡನೇ ವಾರ್ಷಿಕೋತ್ಸವ ಸಮಾರಂಭವನ್ನು ಫೆ12 ರಂದು ಸಂಜೆ 5:30 ಕ್ಕೆ ಆಯೋಜಿಸಲಾಗಿದೆ.

ಸಮಾರಂಭದ ದಿವ್ಯ ಸಾನಿಧ್ಯವನ್ನು ಬಿಲ್‌ಕೆರೂರಿನ ಬಿಲ್ವಾಶ್ರಮ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಲಿದ್ದು, ಪಟ್ಟಣದ ಮಾರುತಿ ನಗರದ ದೇವಿ ಉಪಾಸಕರಾದ ಲಾಲಲಿಂಗೇಶ್ವರ ಶರಣರು ಸಾನಿಧ್ಯವಹಿಸಲಿದ್ದಾರೆ. ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಅಧ್ಯಕ್ಷತೆ ವಹಿಸುವರು, ಕಾಂಗ್ರೇಸ್ ಮುಖಂಡ ಶಾಂತಗೌಡ ಪಾಟೀಲ ಉಪಸ್ಥಿತಿಯಲ್ಲಿ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್.ಸಾವಳಗಿ ಮತ್ತು ನಿವೃತ್ತ ದೈಹಿಕ ಶಿಕ್ಷಕ ಎಸ್.ಬಿ.ಚಲವಾದಿ ಉದ್ಘಾಟಿಸುವರು. ನಿವೃತ್ತ ಡಿ.ವಾಯ್.ಎಸ್.ಪಿ ಎಸ್.ಎಸ್.ಹುಲ್ಲೂರ, ಹೆಸ್ಕಾಂನ ಎ.ಇ.ಇ ರಾಜಶೇಖರ ಹಾದಿಮನಿ ಮುಖ್ಯ ಅತಿಥಿಗಳಾಗಿ, ಚಿಂತಕ ಅರವಿಂದ ಕೊಪ್ಪ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಎಂ.ಎಚ್.ಹಾಲ್ಯಾಳ, ಕಾಂಗ್ರೇಸ್ ಮುಖಂಡ ವಾಯ್.ಎಚ್.ವಿಜಯಕರ, ಮಂಗಳೂರು ಭಾಗದ ಪಿಡಿಓ ಮುತ್ತಪ್ಪ ಢವಳಗಿ ಅತಿಥಿಗಳಾಗಿ ಆಗಮಿಸಲಿರುವದಾಗಿ ಸಂಸ್ಥೆಯ ಕಾರ್ಯಾಧ್ಯಕ್ಷ ವಿರೇಶ ಗುರುಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಉದಯರಶ್ಮಿ ದಿನಪತ್ರಿಕೆ**

# ವಿಜ್ಞಾನ ಮತ್ತು ಆಧ್ಯಾತ್ಮಿಕ ಸಾಮರಸ್ಯ

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ಅದೊಂದು ಮ್ಲಾನವಾದ ಸಾಯಂಕಾಲ.. ಸೂರ್ಯ ಮರಳಿ ಗೂಡು ಸೇರುವ ಸಮಯ ಬಾನೆಲ್ಲ ಕೆಂಪು ಓಕಳಿಯಿಂದ ತುಂಬಿತ್ತು. ತಮ್ಮ ಕೋಣೆಯ ತೆರೆದ ಕಿಟಕಿಯಿಂದ ಬಾನನ್ನು ನೋಡುತ್ತಿದ್ದ ವಿಜ್ಞಾನದ ಋಷಿ ಐನ್ ಸ್ಟೀನ ಅವರಿಗೆ ಮಾನವೀಯತೆಯೆಂಬ ರಕ್ತವು ಭೂಮಿಯಿಂದ ಚಿಮ್ಮಿ ಆಗಸದಲ್ಲಿ

ಮಿಳಿತವಾಗಿ ಗಾಢಾಂಧಕಾರ ಮುಳುಗಿದಂತೆ ಭಾಸವಾಯಿತು. ಎಲ್ಲವನ್ನು ಕಳೆದುಕೊಂಡ ಉದಾಸ, ದುಃಖ ತಪ್ತ ಮುಖಭಾವ, ಕಣ್ಣು ತುಂಬಾ ನೀರು ತುಂಬಿಕೊಂಡ ಆ ವಿಜ್ಞಾನದ ರಾಜರ್ಷಿ ಐನ್ ಸ್ಟೀನ್ ತನ್ನ ಕೋಣೆಯಲ್ಲಿಯೇ ಕಳೆದ ನಾಲ್ಕು ದಿನಗಳಿಂದ ಕುಳಿತು ನಿಟ್ಟುಸಿರುಗರೆಯುತ್ತಿದ್ದರು. ಒಂದೊಮ್ಮೆ ತಮ್ಮ ವಯೊಲಿನ್ ಬಾರಿಸಲು ಪ್ರಯತ್ನಿಸಿ, ಸೋತರು. ಮೆಲ್ಲನೆ ಕೋಣೆಯ ಕದ ತೆರೆದು ಒಳಗೆ ಬಂದ ಐನ್ಸ್ಟೀನ ಅವರ ಮಗಳು 'ಅಪ್ಪ ಈಗಲಾದರೂ ಕೊಂಚ ಊಟ ಮಾಡುವಿರ' ಎಂದು ಕೇಳಿದಳು. ದೀರ್ಘವಾಗಿ ಉಸಿರನ್ನು ಹೊರ ಹಾಕಿ ಐನ್ ಸ್ಟೀನ್ ನನಗೆ ಹಸಿವಿಲ್ಲ ಎಂದುತ್ತರಿಸಿದಾಗ

ನಿರಾಶೆಯಿಂದ ಆಕೆ ಕೋಣೆಯ ಬಾಗಿಲನ್ನು ಸದ್ದಿಲ್ಲದೆ ಮುಚ್ಚಿ ಹೊರ ನಡೆದಳು.

ಕಳೆದ ನಾಲ್ಕು ದಿನಗಳ ಹಿಂದೆ ಜಪಾನ್ ನ ಹಿರೋಶಿಮಾ ಎಂಬ ಊರಿನ ಮೇಲೆ ಅಣು ಬಾಂಬಿನ ದಾಳಿ ಆದಾಗಿನಿಂದ ಐನಸ್ಟೀನ್ ಪರಿತಪಿಸುತ್ತಿದ್ದರು. ಇಂದು ಬಿಬಿಸಿ ವಾರ್ತೆಯಲ್ಲಿ ಮತ್ತೆ ಜಪಾನಿನ ನಾಗಸಾಕಿ ನಗರ ದಲ್ಲಿ ಅಣುಬಾಂಬ ದಾಳಿಯಾದ ಪ್ರಕರಣವನ್ನು ಕೇಳಿದ ಮೇಲಂತೂ ಅವರು ಕುಸಿದು ಹೋದರು.

ಮಾನವ ಇತಿಹಾಸದಲ್ಲಿ ಹಿಂದೆಂದೂ ನಡೆಯುದಂತಹ ಕ್ರೂರ ಆಕ್ರಮಣ, ಅಣು ಬಾಂಬಿನ ಸಿಡಿತದಿಂದಾಗಿ ಉಂಟಾದ



ಪರಿಣಾಮದಲ್ಲಿ ಲಕ್ಷ ಲಕ್ಷ ಸಂಖ್ಯೆಯಲ್ಲಿ ಜನರು ನಿಂತು ನಿಂತಲ್ಲಿಯೇ ಸುಟ್ಟು ಹೋದರು ಅಡಗಿಕೊಳ್ಳಲು ಪ್ರಯತ್ನಿಸಿದವರು ಬೆಂದು ಹೋದರು. ಯಾರದ್ದೋ ಕೈ ಕಾಲುಗಳು ಮುಖ ದೇಹದ ಹಲವಾರು ಭಾಗಗಳು ಬೆಂದು ಕರಕಲಾಗಿ ಹೋದವು. ಸಹಸ್ರಾರು, ಲಕ್ಷಾಂತರ ಎಕರೆ ಭೂಮಿ ಬಂಜರಾಯಿತು. ಅಣುಬಾಂಬಿನಿಂದ




ಸಿಡಿದ ತುಣುಕುಗಳು ದೊಡ್ಡ ದೊಡ್ಡ ಕಟ್ಟಡಗಳನ್ನು ಉರುಳಿಸಿದವು, ಸುಟ್ಟು ಹಾಕಿದವು, ಧರಾಶಾಯಿಯನ್ನಾಗಿಸಿದವು. ಸಮುದ್ರಗಳು ಬಿಸಿಯಿಂದ ಉಕ್ಕೇರಿ ಜಲಚರಗಳು ಬೆಂದು ಹೋದವು. ಗಿಡ, ಮರ, ಬಳ್ಳಿ ಪಶು ಪಕ್ಷಿಗಳು ನಶಿಸಿದವು. ಇಷ್ಟಕ್ಕೆ ಮುಗಿಯಲಿಲ್ಲ ಅಣು ಬಾಂಬಿನ ರುದ್ರನರ್ತನ... ಅಣು ಬಾಂಬಿನ ಸಿಡಿತದಿಂದ ವಾತಾವರಣದಲ್ಲಿ ಬಿಡುಗಡೆಯಾದ ವಿಕಿರಣಗಳು ವಾಯುಮಂಡಲವನ್ನೇ ಆಪೋಶನ ತೆಗೆದುಕೊಂಡು ಮುಂದಿನ ಹಲವಾರು ದಶಕಗಳ ಕಾಲ ಜನರು ವಿವಿಧ ಬಗೆಯ ಕಾಯಿಲೆಗಳಿಂದ ಅಂಗವಿಕಲತೆಗಳಿಂದ ನರಳುವಂತಹ ತೊಂದರೆಯನ್ನು ವಾತಾವರಣದಲ್ಲಿ ಬಿತ್ತಲ್ಪಟ್ಟಿತು.

ಅಣು ಬಾಂಬ ಸ್ಫೋಟದ ನಂತರದ ದುಷ್ಪರಿಣಾಮಗಳ ಜೊತೆ ಜೊತೆಗೆ ಸುದ್ದಿ ಮಾಧ್ಯಮಗಳಲ್ಲಿ ವಿಜ್ಞಾನದ ಆವಿಷ್ಕಾರಗಳ ಕುರಿತು ಅತ್ಯಂತ ತೀವ್ರ ಮತ್ತು ಆಕ್ರೋಶಕಾರಿ ಹೇಳಿಕೆಗಳು ಹೊರಬೀಳಲಾರಂಭಿಸಿದವು. ಮಾನವನ ಹಿತಕ್ಕೆ ಬಳಸಬಹುದಾದ ಅಣುಶಕ್ತಿಯನ್ನು ಮನುಕುಲದ ವಿನಾಶಕ್ಕೆ ಬಳಸಿದ್ದು ಐನ್ಸ್ಟೀನ್ ಚಿತ್ತವನ್ನು ಕಲಕಿತ್ತು.

ಮುಂದಿನ ಹಲವಾರು ದಿನಗಳು ಆತ ನಿದ್ರಾ ರಹಿತ ಮತ್ತು ವ್ಯಾಕುಲಚಿತ್ತ ಸ್ಥಿತಿಯಲ್ಲಿದ್ದ. ಅಮೆರಿಕಾದ ಅಧ್ಯಕ್ಷ ರೂಸ್ ವೆಲ್ಟನನ್ನು ತಾನು ಭೇಟಿಯಾಗಿ ಅಣುಸ್ಫೋಟದ ಕುರಿತ ದುಷ್ಪರಿಣಾಮಗಳನ್ನು ವಿವರಿಸಿದ್ದು ಕೇವಲ ಹಿಟ್ಲರ್ ನನ್ನು ಯುದ್ಧದ ಭೀಕರ ಆಶಯದಿಂದ ಹಿಮ್ಮೆಟ್ಟಿಸಲು ಮಾತ್ರ. ಆದರೆ ರೂಸ್ ವೆಲ್ಟ್ ತನ್ನನ್ನು ಕತ್ತಲೆಯಲ್ಲಿರಿಸಿ ಅಣುಸ್ಫೋಟ ನಡೆಸಿದ್ದು ಆತನಿಗೆ ಅರಗಿಸಿಕೊಳ್ಳಲಾಗಲಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಮಾನವನ ಜೀವನದ ಉನ್ನತ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳಲೆ ಹೊರತು ಮನುಕುಲವನ್ನು ವಿನಾಶದಂಚಿಗೆ ತಳ್ಳಲು ಅಲ್ಲ ಎಂಬ ಎಲ್ಲ ವಿಜ್ಞಾನಿಗಳ ಆಶಯವನ್ನು ಒಂದೇ ಏಟಿಗೆ ಗುಡಿಸಿ ಹಾಕಿ ಬಿಟ್ಟಿದ್ದ ಅಮೆರಿಕಾದ ಅಧ್ಯಕ್ಷ ರೂಸ್ ವೆಲ್ಟ್. ಮುಂದಿನ ಹಲವಾರು ದಿನಗಳ ಕಾಲ ಐನ್ಸ್ಟೀನ್ ದುಃಖತಪ್ತನಾಗಿ ತನ್ನ ಕೋಣೆಯಲ್ಲಿ ಬಂಧಿಯಾಗಿದ್ದ.

ಒಂದು ದಿನ ಐನ ಸ್ಟೀನ ವಿಜ್ಞಾನ ಮತ್ತು ತಂತ್ರಜ್ಞಾನದ ಪಾಲಿಸಿ ವಿಚಾರ'ದ'ಲ್ಲಿ ಸರ್ಕಾರದೊಂದಿಗೆ ಮಾಡಿಕೊಂಡ ಎಲ್ಲ ಒಡಂಬಡಿಕೆಗಳಿಂದ ತನ್ನನ್ನು ತಾನು ಮುಕ್ತಗೊಳಿಸಿಕೊಂಡು ಶಿಕ್ಷಣ ಸಂಸ್ಥೆಗಳನ್ನು ಕಟ್ಟಲು ನಿರ್ಧರಿಸಿದ. ಮಕ್ಕಳಿಗೆ ಹದಿಹರೆಯದವರಿಗೆ ಮತ್ತು ಯುವಕರಿಗೆ ಎಲ್ಲ ಬಗೆಯ ಶಿಕ್ಷಣದ ಜೊತೆ ಜೊತೆಗೆ ಆಧ್ಯಾತ್ಮಿಕತೆಯ ಶಿಕ್ಷಣವನ್ನು ಕೂಡ ಕಲಿಸುವ ಸಂಸ್ಥೆಯನ್ನು ಸ್ಥಾಪಿಸಿದರು.

ಶಿಕ್ಷಣ ಸಂಸ್ಥೆಯ ಸ್ಥಾಪನೆಗೆ ಪ್ರಸಿದ್ಧ ತತ್ವಶಾಸ್ತ್ರಜ್ಞರಾದ ಬರ್ಟ್ರೆಂಡ್ ರಸೆಲ್ ಮತ್ತು ಆಲ್ಬರ್ಟ್ ಸ್ಚಿವಿಟ್ಜರ್ ಜೊತೆಗೆ ಹತ್ತಕ್ಕೂ ಹೆಚ್ಚು ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳನ್ನು ಆಹ್ವಾನಿಸಿದ್ದ ಐನ್ ಸ್ಟೀನ್ ಮಹಾತ್ಮ ಗಾಂಧೀಜಿಯವರ ಫೋಟೋವೊಂದಕ್ಕ ಹಾರ ಹಾಕುವ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಗಂಟಲಲ್ಲಿ ಸಿಕ್ಕಿಹಾಕಿಕೊಂಡವರಂತೆ ಮಾತನಾಡಿದ ವಿಜ್ಞಾನಿ ಐನ್ಸ್ಟೀನ್ ಗಾಂಧೀಜಿಯವರನ್ನು ಕುರಿತು ತನ್ನ ದೇಶದ ಸ್ವಾತಂತ್ರ್ಯವನ್ನು ಕೇವಲ ಅಹಿಂಸಾತ್ಮಕ



ಹೋರಾಟದಿಂದ ಪಡೆದ, ಸತ್ಯಾನ್ವೇಷಕ ಮತ್ತು ಆಧ್ಯಾತ್ಮಿಕತೆಯ ಅರಿವಿದ್ದ ಏಕೈಕ ವ್ಯಕ್ತಿ ಎಂದು ಬಣ್ಣಿಸಿದರು. ವಿಜ್ಞಾನ ಮತ್ತು ಆಧ್ಯಾತ್ಮಿಕತೆಯ ನಡುವೆ ಇರುವ ಸಾಮರಸ್ಯವೆ ಜೀವ ಜಗತ್ತನ್ನು ಕಾಪಾಡಬಲ್ಲದು ಎಂಬ ಸತ್ಯದ ಅರಿವನ್ನು ಹೊಂದಿದ್ದು ಮಹಾತ್ಮ ಗಾಂಧಿ ಎಂದು ಅವರು ಭಾವನಾತ್ಮಕವಾಗಿ ಸ್ಮರಿಸಿದರು.

ಮುಂದೆ ಹಲವಾರು ವರ್ಷಗಳ ನಂತರ ತಮ್ಮ ಶಿಕ್ಷಣ ಸಂಸ್ಥೆಗಳನ್ನು ಭೇಟಿಯಾಗಲು ಬಂದ ಜಪಾನ್ ನಿಯೋಗ ವನ್ನು ಬರಮಾಡಿಕೊಂಡ ವಿಜ್ಞಾನಿ ಐನ್ಸ್ಟೀನ್ ಅವರ ಮುಂದೆ ನಾನು ನನ್ನೆಲ್ಲಾ ತಪ್ಪುಗಳನ್ನು ಒಪ್ಪಿಕೊಳ್ಳುತ್ತೇನೆ ನೀವು ಏನು ಶಿಕ್ಷೆ ಕೊಟ್ಟರೂ ಅನುಭವಿಸಲು ಸಿದ್ಧ ಎಂದು ದುಃಖ ತಪ್ತರಾಗಿ ಹೇಳಿದರು. ಅವರ ನೋವು ಜಪಾನ ನಿಯೋಗದ ಮನ ಕಲಕಿತು.




ಸ್ನೇಹಿತರೆ ಜಗತ್ಪ್ರಸಿದ್ಧ ಮತ್ತು ವಿಜ್ಞಾನದ ಮಹರ್ಷಿ ಎಂದೇ ಕರೆಯಲ್ಪಟ್ಟ ಅಲ್ಬರ್ಟ್ ಐನ್ಸ್ಟೀನ್ ನೀಡಿದ ಏಕೈಕ ಸಂದೇಶ "ವಿಜ್ಞಾನ ಮತ್ತು ಆಧ್ಯಾತ್ಮಿಕತೆಯ ನಡುವಣ ಸಾಮರಸ್ಯ ಜೀವ ಜಗತ್ತಿನ ಪಲ್ಲವಿಕೆಗೆ ಕಾರಣವಾಗುತ್ತದೆ.

ವಿಜ್ಞಾನದ ಆವಿಷ್ಕಾರಗಳನ್ನು ನಮ್ಮ ಉನ್ನತಿಗೆ ಬಳಸಿಕೊಳ್ಳೋಣ" ಎಂದು ಆಶಿಸುತ್ತಾ

### ಬಸವನ ಬಾಗೇವಾಡಿ ತಾಲೂಕು ದಂಡಾಧಿಕಾರಿ ಯಮನಪ್ಪ ಸೋಮನಕಟ್ಟಿ ಅಭಿಮತ

# ಕನ್ನಡ ಆಡಳಿತ ಭಾಷೆ ಪರಿಣಾಮಕಾರಿಯಾಗಲಿ

**ಉದಯರಶ್ಮಿ ನ್ಯೂಸ್**



ಬಸವನ ಬಾಗೇವಾಡಿ: ಕನ್ನಡ ಆಡಳಿತ ಭಾಷೆಯಾಗಿರುವದರಿಂದ ಪರಿಣಾಮಕಾರಿಯಾಗಿ ನಾಡಿನ ಎಲ್ಲ ಜನತೆ ಮಾತನಾಡಲಿ ಎಂದು ಬಸವನ ಬಾಗೇವಾಡಿ ತಾಲೂಕಾ ದಂಡಾಧಿಕಾರಿ ಯಮನಪ್ಪ ಸೋಮನಕಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಶುಕ್ರವಾರ ಬಸವನಬಾಗೇವಾಡಿ ಪಟ್ಟಣದಲ್ಲಿ ತಾಯಿ ಭುವನೇಶ್ವರಿ ಹೊತ್ತ ಕನ್ನಡ ರಥ ಬಸವೇಶ್ವರ ದೇವಾಲಯದಿಂದ ಡಾ ಅಂಬೇಡಕರ ಹಾಗು ಸಂಗೊಳ್ಳಿ ರಾಯಣ್ಣ ವೃತ್ತ ಮುಖಾಂತರ ಬಸವ ಭವನ ಮೂಲಕ ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕರು, ಸಾಹಿತಿಗಳು. ಹೋರಾಟಗಾರರು ಕಂದಾಯ ಇಲಾಖೆ ,ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು,ಕನ್ನಡ ರಕ್ಷಣಾ ವೇದಿಕೆಯ ಅಧ್ಯಕ್ಷರು ಹಾಗು ಪದಾಧಿಕಾರಿಗಳ ನೇತೃತ್ವದಲ್ಲಿ ಬೃಹತ್ ಪ್ರಮಾಣದ ಮೆರವಣಿಗೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಕನ್ನಡ ಸಾಹಿತ್ಯದ ಮೂಲಕ ಕನ್ನಡ ಬೆಳೆಸೋಣ ಹಾಗು ಉಳಿಸೋಣ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿ, ಕನ್ನಡ ಸಂಸ್ಕೃತಿ ಹಾಗು ಸಾಹಿತ್ಯ ಕನ್ನಡ ನಾಡನ್ನು ಶ್ರೀಮಂತಗೊಳಿಸಿದೆ. ನಾಡಿನ ಏಳು ಕೋಟಿ ಜನರು ಕನ್ನಡ ಬರೆಯುವ ಹಾಗು ಮಾತನಾಡುವದನ್ನು ಸರ್ಕಾರ ಕಡ್ಡಾಯಗೊಳಿಸಬೇಕು. ಮೈಸೂರು ರಾಜ್ಯ ಮರುನಾಮಕರಣ ಮಾಡಿ ಕನಾ9ಟಕ ವೆಂದು ಹೆಸರಿಟ್ಟಿದ್ದು ಐವತ್ತು ವರ್ಷ ಗತಿಸಿದರಿಂದ ಕನಾ9ಟಕ ಸುವರ್ಣ ಸಂಭ್ರಮ ನಿಮಿತ್ತ ನಾಡಿನಾದ್ಯಾಂತ ಕನ್ನಡ ರಥ ಜಾಗೃತಗೊಳಿಸುತ್ತಿದೆ ಎಂದರು

ಕನ್ನಡ ರಕ್ಷಣಾ ವೇದಿಕೆಯ ಅಧ್ಯಕ್ಷ ಅಶೋಕ ಹಾರಿವಾಳ ಮಾತನಾಡಿ, ಕನ್ನಡ ರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರದು. ಜೀವನದ ಉದ್ದಕ್ಕೂ ಕನ್ನಡ ಉಳಿಸುವದಕ್ಕಾಗಿ ಹೋರಾಡುವೆ. ಕನ್ನಡ ನಮ್ಮೆಲ್ಲರ ಉಸಿರು ಎಂದರು.

ಪುರಸಭೆ ಮುಖ್ಯಾಧಿಕಾರಿ ಎಮ್ ಎನ್ ಚಿತ್ತರಗಿ, ತಾಲೂಕ ಪಂಚಾಯತ ಕಾಯ9ನಿವಾ9ಹಕ ಅಧಿಕಾರಿ ಯುವರಾಜ ಹನಗಂಡಿ, ಕ್ಷೇತ್ರ ಶಿಕ್ಷಣಾಧಿಕಾರಿ ವಸಂತ ರಾಠೋಡ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಮಂಗಾನವರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾ- ರಿಗಳಾದ ಅಭಿಷೇಕ ಚಕ್ರವರ್ತಿ, ರಾಜೇಸಾಬ ಶಿವನಗುತ್ತಿ ಬಸವರಾಜ ಸೋಮಪೂರ, ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಾನಂದ ಡೋಣೂರ, ಪದಾಧಿಕಾರಿಗಳಾದ ಶಿವು ಮಡಕೇಶ್ವರ, ವಿಜಯಪುರ ಕೋಟ್ರೇಶ ಹಡಗಲಿ, ಬಸವರಾಜ ಮೇಟಿ, ಮಕಬುಲ್ ಅಂಗಡಗೇರಿ, ಬಿ ಬಿ ಚಕ್ರಮಣಿ, ಬಸವರಾಜ ಚಿಂಚೊಳ್ಳಿ, ಮಹಾದೇವಿ ಬಿರಾದಾರ, ಶಾಂತಾ ಚೌರಿ, ರವಿಗೌಡ ಚಿಕ್ಕೊಂಡ, ಉಮೇಶ ಕೌಲಗಿ, ಹಣಮಂತ ಬಾರಿಕಾಯಿ, ಎಸ್ ಬಿ ದಳವಾಯಿ, ಕಮಲಾ ಪದರಾ, ರಮೇಶ ಪೂಜಾರಿ, ಮಹೇಶ ಬಳಗಾನೂರ, ಪಿ ಯು ರಾಠೋಡ, ಎಮ್ ವಿ ಗೊಬ್ಬರ, ಅನುಜಾ ಗುಬ್ಬಾ, ವಾಣಿ ಕುಲಕರ್ಣಿ, ಶರಣಪ್ಪ ಒಂಕಾರ, ಮಹಾಂತೇಶ ಚಕ್ರವರ್ತಿ, ಮಹಾಂತೇಶ ಸಾಸಬಾಳ, ರಮಜಾನ ಹೆಬ್ಬಾಳ, ಸುಭಾಶ್ಚಂದ್ರ ಹಡಪದ, ಬಸವರಾಜ ನಂದ್ಯಾಳ, ಅಶೋಕ ಹಂಚಲಿ, ರೋಹಿಣಿ ರೋಣದ, ಶ್ರೀದೇವಿ ಸಾಳುಂಕೆ, ಪುಷ್ಪಾ ಕುಲಕರ್ಣಿ, ಹಣಮಂತ ಮಾದರ, ಗೀತಾ ಗಬ್ಬೂರ, ಅನಸೂಯ ಜುಗತಿ, ಜಯಶ್ರೀ ಗದಗ, ವಿದ್ಯಾವತಿ ಕಿಣಗಿ, ಶಾರದಾ ಜಿಡ್ಡಿಮನಿ ಮುಂತಾದವರು ಉಪಸ್ಥಿತರಿದ್ದರು

# ನಮ್ಮ ಕೆಲಸ ಶೇರುದಾರ ರೈತರಿಗೆ ತೃಪ್ತಿತಂದಿದ್ದರೆ ಮಾತ್ರ ಬೆಂಬಲಿಸಿ

**ಉದಯರಶ್ಮಿ ನ್ಯೂಸ್**



ಇಂಡಿ: 1983 ರಲ್ಲಿ ಶಂಕು ಸ್ಥಾಪನೆ ಹೊಂದಿ 2017 ರ ವರೆಗೆ ನೆನೆಗುದಿಗೆ ಬಿದಿದ್ದ ಮರಗೂರ ಗ್ರಾಮದ ಶ್ರೀ ಭೀಮಾಶಂಕರ ಸಕ್ಕರೆ ಕಾರ್ಖಾನೆ ಸಮರ್ಪಣೆ ಹೊಂದಿತ್ತು. ಅದಕ್ಕೆ ಮರು ಜೀವ ನೀಡಿ ಸರ್ಕಾರದಿಂದ 45.89 ಕೋಟಿ ಅನುದಾನ ಮಂಜೂರಿ ಪಡೆದುಕೊಂಡು ಕೇವಲ 3 ವರ್ಷಗಳಲ್ಲಿ ಕಾರ್ಖಾನೆ ಕಟ್ಟಿದ್ದೇನೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 5 ವರ್ಷಗಳ ಕಾಲ ಕಾರ್ಖಾನೆ ಸಮರ್ಪಕವಾಗಿ ನಡೆಸಿಕೊಂಡು ಬಂದಿದ್ದೇನೆ. ಪ್ರತೀ ವರ್ಷ ಹೆಚ್ಚಿನ ಕಬ್ಬು ನುರಿಸುತ್ತ ಕಳೆದ ವರ್ಷ 5.29 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಲಾಗಿದೆ. ಈ ಭಾಗದ ರೈತರಿಗೆ ಈ ಕಾರ್ಖಾನೆ ಜೀವನಾಡಿಯಾಗಿ ಕೆಲಸ ಮಾಡುತ್ತಿದೆ. ಈ ಎಲ್ಲಾ ಕೆಲಸಗಳು ಶೇರುದಾರ ರೈತರಿಗೆ ತೃಪ್ತಿತಂದಿದ್ದರೆ ಮಾತ್ರ ನನಗೆ ಮತ್ತು ಸಹೋದ್ಯೋಗಿಗಳಿಗೆ ಬೆಂಬಲಿಸಿ ಆಯ್ಕೆ ಮಾಡಿ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಮನವಿ ಮಾಡಿದರು.

ಸಧ್ಯದ ಪರಿಸ್ಥಿತಿಯಲ್ಲಿ ಕಾಖಾನೆ 450 ಕೋಟಿ ರೂ ದುಡಿಯುತ್ತಿದ್ದು 200 ಕೋಟಿ ರೂ ಇಥೆನಾಲ್ಗೆ ಹೀಗೆ ಕಾರ್ಖಾನೆ 650 ಕೋಟಿ ರೂ ದ್ದಾಗಿದೆ ಎಂದರು.

ಅದಲ್ಲದೆ ನಾವು ಕಬ್ಬು ತೆಗೆದುಕೊಳ್ಳಲು ಮತ್ತು ಸಕ್ಕರೆ ಮಾರಲು ಒಂದೇ ಅಳತೆ ಮಾನ ಬಳುಸುತ್ತಿದ್ದು ಕಬ್ಬಿನ ತೂಕದಲ್ಲಿ ಮೋಸವಿಲ್ಲ ಎಂದರು.

ಕಾರ್ಮಿಕರಿಗೆ ವಿಮೆ ನೀಡುತ್ತಿದ್ದೇವೆ. ಅದು ಅವರ ಕುಟುಂಬಕ್ಕೆ ಅನುಕೂಲ ಎಂದರು.


ಕಾರ್ಖಾನೆಗೆ ಈ ಹಿಂದೆ ಸಿದ್ದರಾಮಯ್ಯನವರು ಮುಖ್ಯ ಮಂತ್ರಿ ಇದ್ದಾಗ 50 ಕೋಟಿ ರೂ ಸೇ- ರಿದಂತೆ ಎಸ್‌ಡಿಎಫ್, ಅಪೆಕ್ಸ ಬ್ಯಾಂಕು, ಬಾಗಲಕೋಟ ಮತ್ತು ವಿಜಯಪುರ ಡಿ ಸಿ ಸಿ ಮತ್ತು ಬೀರಲಿಂಗೇಶ್ವರ ಜೊಲ್ಲೆ ಅವರ ಬ್ಯಾಂಕು ಸಹಕಾರ ನೀಡಿವೆ ಎಂದರು. ಬೆಳಗಾಂವ ಸಂಸದ ಅಂಗಡಿ ಮತ್ತು ಶಿವಾನಂದ ಪಾಟೀಲ, ಅಜಯಕುಮಾರ ಸರನಾಯಕ ಸಹಾಯ ಸ್ಮರಿಸಿದರು.

ಬಳ್ಳೊಳ್ಳಿ ಗ್ರಾಮದ ದಿ. ನಾಕರೆ, ದಿ.ಬಿ.ಕೆ.ಗುಡದಿನ್ನಿ ಮತ್ತು ಶೇರುದಾರ ರೈತರು ಕಂಡಿದ್ದ ಕನಸು ನನಸನ್ನಾಗಿಸಿದ್ದೇನೆ. ಕೇಂದ್ರ ಸರ್ಕಾರದ ನಿತೀಶ ಗಡ್ಕರಿ ಅವರು ಇತ್ತೀಚೆಗೆ ಈ ಕಾರ್ಖಾನೆಯಲ್ಲಿ ಇಥೆನಾಲ್ ಉತ್ಪಾದನೆಗೆ ಮಂಜೂರಾತಿ ನೀಡಿದ್ದಾರೆ. ಮುಂದಿನ ವರ್ಷದ ಕಬ್ಬು ನುರಿಸುವ ಹಂಗಾಮಿನಲ್ಲಿ ಇಥೆನಾಲ್ ಉತ್ಪಾದನೆ ಮಾಡಲಾಗುವದು. ಅದಕ್ಕಾಗಿ ಅಗತ್ಯ ಕಾಮುಗಾರಿಗಳು ನಡೆದಿವೆ ಎಂದ ಅವರು ಇದರಿಂದ ರೈತರ ಕಬ್ಬಿಗೆ ಹೆಚ್ಚಿನ ದರ ನೀಡಲು ಸಾಧ್ಯವಾಗುತ್ತದೆ ಎಂದರು.

ಬರುವ ದಿನಾಂಕ 11 ರಂದು ಕಾರ್ಖಾನೆಗೆ ನಿರ್ದೇಶಕ ಮಂಡಳಿಗೆ ಚುನಾವಣೆ ನಡೆಯಲಿದ್ದು, ಸಾಮಾನ್ಯ ಅ ವರ್ಗಕ್ಕೆ 5 ಜನರನ್ನು ಆಯ್ಕೆ ಮಾಡಬೇಕಿದೆ. 8 ಜನ ಕಣದಲ್ಲಿದ್ದಾರೆ. ಇವರಲ್ಲಿ ನನ್ನನ್ನು ಸೇರಿ ಇನ್ನಿತರ ಅಭ್ಯರ್ಥಿಗಳಾದ ಬಸವರಾಜ ಸಿದ್ರಾಮಪ್ಪ ಧನಶ್ರೀ, ಮಲ್ಲನಗೌಡ ರಾಮಚಂದ್ರಗೌಡ ಪಾಟೀಲ, ರೇವಗೊಂಡಪ್ಪ ಅಣ್ಣಾರಾಯ ಪಾಟೀಲ ಮತ್ತು ಸಿದ್ದಣ್ಣ ರಾಮಣ್ಣ ಬಿರಾದಾರ ಅವರಿಗೆ ಅದರಂತೆ ಮಹಿಳಾ ಮೀಸಲು ಸ್ಥಾನಕ್ಕೆ ಸ್ಪರ್ಧಿಸಿರುವ ಲಲಿತಾ ಅಡಿವೆಪ್ಪ ನಡಗೇರಿ ಮತ್ತು ಸರೋಜಿನಿ ಸಿದ್ದಾರಾಯ ಪಾಟೀಲ ಅವರಿಗೆ ಪರಿಶಿಷ್ಟ ಜಾತಿಯ ಮೀಸಲು ಸ್ಥಾನಕ್ಕೆ ಸ್ಪರ್ಧೆ ಮಾಡಿರುವ ಅಶೋಕ ಅಂಬಾಜಿ ಗಜಾಕೋಶ ಅವರಿಗೆ ತಮ್ಮ ಅಮೂಲ್ಯವಾದ ಮತ ನೀಡಿ ಆಯ್ಕೆ ಮಾಡಬೇಕೆಂದು ಮನವಿ ಮಾಡಿಕೊಂಡರು.

ಮಹಿಳಾ ಮೀಸಲು ಸ್ಥಾನಕ್ಕೆ ಸ್ಪರ್ಧೆ ಮಾಡಿರುವ ಇನ್ನೋರ್ವ ಅಭ್ಯರ್ಥಿ ದಾನಮ್ಮ ಕರಬಸಪ್ಪ ಬಿರಾದಾರ ಈಗಾಗಲೇ ಕಣದಿಂದ ಹಿಂದಕ್ಕೆ ಸರಿದಿರುವದಾಗಿ ಹೇಳಿಕೆ ನೀಡಿದ್ದಾರೆ. ಅವರಿಗೆ ಅಭಿನಂದಿಸುವುದಾಗಿ ಹೇಳಿದರು.

# ಉಮಾಶಂಕರ ಪುಸ್ತಕ ಪ್ರಶಸ್ತಿಗೆ 'ನಗೆಗುಳಿಗೆ' ಆಯ್ಕೆ




**ಉದಯರಶ್ಮಿ ನ್ಯೂಸ್**

ಆಲಮೇಲ: ಹುಬ್ಬಳ್ಳಿಯ ಉಮಾಶಂಕರ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ ಪ್ರಸಕ್ತ ಸಾಲಿನ ಪುಸ್ತಕ ಪ್ರಶಸ್ತಿಗೆ ಪಟ್ಟಣದ ವೈದ್ಯ ಸಾಹಿತಿ ಡಾ ಸಮೀರ ಹಾದಿಮನಿ ಅವರ 'ನಗೆಗುಳಿಗೆ' ಕೃತಿ ಆಯ್ಕೆ ಆಗಿದೆ.

ಚುನಾವಣೆ, ಕೋರೋನಾ, ಬೆಲೆಏರಿಕೆ, ರಾಜಕೀಯ, ಪ್ರಚಲಿತ ವಿದ್ಯಮಾನಗಳು ಹೀಗೆ ವಿವಿಧ ವಿಷಯಗಳ 108 ಪ್ರಕಟಿತ ವ್ಯಂಗ್ಯಚಿತ್ರಗಳ ಸಂಕಲನ ಆಗಿರುವ ಈ ಕೃತಿಗೆ ಖ್ಯಾತ ವ್ಯಂಗ್ಯಚಿತ್ರಕಾರ ಪಂಜು ಗಂಗೊಳ್ಳಿ ಮತ್ತು ದಿನೇಶ ಕುಕ್ಕುಜಡ್ಕ ಅವರು ಮುನ್ನುಡಿ-ಬೆನ್ನುಡಿ ಬರೆದಿರುವರು.

ವೃತ್ತಿಯಲ್ಲಿ ವೈದ್ಯರಾಗಿರುವ ಡಾ ಸಮೀರ ಹಾದಿಮನಿಯವರು ಉಪ್ಪು ನೀರಿನ ಸೆಲೆ, ಶ್ಲಾಘನೆ-ಖಂಡನೆ ಸೇರಿದಂತೆ ಐದು ಕೃತಿಗಳನ್ನು ರಚಿಸಿರುವರು. ಇವರು ಜಿಲ್ಲಾ ರಾಜ್ಯೋತ್ಸವ, ಸಗರನಾಡು ಸೇವಾ ಪ್ರತಿಷ್ಠಾನದ ಯುವ ಪ್ರಶಸ್ತಿ, ಬಸವಶಾಂತಿ ರಾಜ್ಯಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಮಾರ್ಚ್ 10 ರಂದು ಹುಬ್ಬಳ್ಳಿಯಲ್ಲಿ ಜರುಗಲಿರುವ ಭಾವಸಂಗಮ ಪ್ರತಿಷ್ಠಾನದ ದಶಮಾನೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಜರುಗಲಿದ್ದು, ಪ್ರಶಸ್ತಿಯು ಸ್ಮರಣಿಕೆ, ಪ್ರಶಸ್ತಿ ಫಲಕ ಮತ್ತು ಗೌರವ ಸನ್ಮಾನ ಒಳಗೊಂಡಿರುತ್ತದೆ ಎಂದು ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯಾಧ್ಯಕ್ಷ ರಾಜೇಂದ್ರ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಉದಯರಶ್ಮಿ ದಿನಪತ್ರಿಕೆ**

## ಕಾವ್ಯರಶ್ಮಿ

– ಮಮತಾ

("ನಮ್ಮ ಕಥಾ ಅರಮನೆ" ಬರಹಗಾರರು)



### ಸಪ್ತಪದಿ

ತುಳಿಯುತ ಸಪ್ತಪದಿ ನೀಡುತ ಭಾಷೆಯ/
ಇಹಪರಕೂ ಸಹಚರರಾಗಿರುವ ಆಶಯ//

ಸ್ವರ್ಗದಿ ನಿಶ್ಚಿತವಂತೆ ಈ ಬ್ರಹ್ಮಗಂಟು।
ಆರಂಭ ನವ ವಧು-ವರರ ಬಾಳ ನಂಟು॥

ಎರಡು ಜೀವಗಳ ಬೆಸೆವ ಆತ್ಮಾನುಬಂಧ।
ಸ್ನೇಹ ಪ್ರೇಮಾನುರಾಗದ ಪ್ರಣಯಗಂಧ॥


ಏಳು ಹೆಜ್ಜೆಗಳ ಜೊತೆಯಾಗಿ ಇಡುತ।
ಏಳುಬೀಳಲಿ ಈರ್ವರೂ ಹೆಗಲಾಗುತ॥

ಅರಿತು ಬೆರೆತರೆ ನಿಜಸಾಂಗತ್ಯದ ಸಮೃದ್ಧಿ।
ನೋವು ನಲಿವುಗಳ ಮಧ್ಯೆ ವಂಶಾಭಿವೃದ್ಧಿ॥

ಒಡಗೂಡಿ ಸಾಗಿದರೆ ಬಾಳೇ ಒಲವಿನೂಟ।
ಸಾಮರಸ್ಯ ತಪ್ಪಿದರೆ ಬದುಕೇ ಬಯಲಾಟ॥



# ಸೂರ್ಯ ಮುಳುಗದಿದ್ದರೆ



## ಭಾವರಶ್ಮಿ

–ಹರಿಹರ ಬಿ ಆರ್

("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**



(ಕಾಲ್ಪನಿಕ ಕಥೆ)

ಭೂಲೋಕದಲ್ಲಿನ ಜನರೆಲ್ಲ ಅಲ್ಲಲ್ಲೇ ಗುಂಪು ಗುಂಪಾಗಿ ಜನ ಸೇರತೊಡಗಿದರು. ಅದಕ್ಕೂ ಮೊದಲು ಏನಾಯಿತೆಂದರೆ ಇನ್ನೇನು ಮುಳುಗಬೇಕಾಗಿದ್ದ ಸೂರ್ಯ ಅಲ್ಲಿಯೇ ಮನುಜರ ಸಹವಾಸದಂತೆ ಮುಷ್ಕರ ಹೂಡುವಂತೆಯೋ ಅಥ- ವಾ ಸೋಮಾರಿತನವೋ ಗೊತ್ತಿಲ್ಲ ನಿಂತಲ್ಲಿಯೇ ನಿಂತುಬಿಟ್ಟ. ಕಾಲು ಗಂಟೆಯ ನಂತರ ಸೂರ್ಯ ಅಚಲನಾಗಿ ಇದ್ದಲ್ಲಿಯೇ ಇರುವುದು ಗಮನಕ್ಕೆ ಬಂದಿತು.

ಅಂದರೆ ಜನರಿಗೆಲ್ಲ ವಾಸ್ತವದಲ್ಲಿ ಮುಷ್ಕರ ಹೂಡಿರುವ ಅಥವಾ ಸೋಮಾರಿಯಂತೆ ಅಚಲವಾಗಿ ನಿಂತಿರುವ ಭುವಿಯ ಕಡೆ ಗಮನಿಸದೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡಲು ಪ್ರಾರಂಭಿಸಿದರು.

"ಹೇ ಸೂರ್ಯನೇ ನೀನಿಂದು ಪಶ್ಚಿಮದಲ್ಲಿ ಹುಟ್ಟುತ್ತಿರುವೆಯಾ? ಅಪಶಕುನ!! ಅಪಶಕುನ!! ಇಂದೇನೋ ಗಂಡಾಂತರ ಕಾದಿದೆ" ಎಂದು ಒಬ್ಬರು ಹೇಳಿದರು.

"ಪಂಚಾಂಗದ ಜ್ಯೋತಿಷ್ಯಗಳು/ಬರಹಗಳು ಸುಳ್ಳಾಗುತ್ತಿದೆಯಾ?"

"ನಾವುಗಳು ಮಾತಾಡುವಾಗ ಅನೇಕ ಜನರು ವ್ಯಂಗ್ಯವಾಗಿ ಕುಹಕವಾಗಿ ಮಾತನಾಡುತ್ತಿರುವರು. ಅಂತಹ ಜನರು ನಮಗೆ ವಿಶ್ವಾಸಪೂರ್ವಕವಾಗಿ ಬೇಕಾದ ಜನರುಗಳು. ಅದಕ್ಕಾಗಿಯೇ ನಾವು ಜನರನ್ನು ಬಿಟ್ಟುಕೊಡದೇ ಜನರು ಸರಿಯಿಲ್ಲವೆನ್ನುವುದಕ್ಕೆ ಬದಲಾಗಿ ಲೋಕವೇ ಕೆಟ್ಟು ಹೋಗಿದೆ ಎಂದು ಬೈದುಕೊಳ್ಳುತ್ತಿರುವುದು, ಇದು ಭೂಮಿತಾಯಿಯ ಮುನಿಸ್ಸಿಗೆ ಕಾರಣವಾಗುತ್ತಿದೆಯೇ"

"ಸೂರ್ಯ ನಮಸ್ಕಾರ ಮಾಡುವುದು ಯಾವಾಗ? ಊಟ ತಿಂಡಿಗಳ ಸಮಯವೇನು? ಇನ್ನು ಮೇಲೆ ಸೂರ್ಯನ ಉದಯಾಸ್ತಗಳು ಇರುವುದಿಲ್ಲವೇ?"

ಬ್ರಾಹ್ಮಣರು "ಪೂಜೆ ಪುನಸ್ಕಾರಗಳು ಹೇಗೆ?"

ವೃದ್ಧರು "ಬಿಸಿಲು ಕಾಯಿಸುವ ಅವಶ್ಯಕತೆಯೇ ಇಲ್ಲ. ಹೀಗೇ ಇದ್ದರೆ ಸೆಖೆಯಾಗುತ್ತಿರುತ್ತದೆ. ಮಳೆ ಚಳಿ ಇರುವುದಿಲ್ಲವೇ?

ತಾಯಂದಿರು "ಎಳೆಯ ಮಕ್ಕಳು ಕಪ್ಪು ಕರಕಲಾಗುವರೇ" ಎಂದೆಲ್ಲ ನಾನಾ ವಿಧವಾಗಿ ಯೋಚಿಸುತ್ತಿದ್ದರು.

@@@@@@@@

ಹೀಗೆಯೇ ಎರಡು ದಿನವಾಗಿರಲು, ಜನರೆಲ್ಲ ನಿದ್ದೆಯಿಲ್ಲದೆ ದೈನಂದಿನ ಕಾರ್ಯಗಳನ್ನು ಮರೆತು ಆಕಾಶ ನೋಡುವುದು ಮನಸ್ಸಿಗೆ ಬಂದಂತೆ ಮಾತನಾಡಿಕೊಳ್ಳುವುದು, ನಡೆಯುತ್ತಿತ್ತು.

ಕೂಡಲೇ ಇದರ ಬಗ್ಗೆ ಯೋಚಿಸದಿದ್ದ ಮತ್ತು ಇದನ್ನೆಲ್ಲ ಕಂಡು ದೂರದರ್ಶನದ ವಾರ್ತೆಯ ಕಲಾಪಗಳು ಪ್ರಾರಂಭ "ಯಾರೂ ಕಂಡರಿಯದ ಅಚ್ಚರಿ ನಾವು ಪ್ರಸ್ತಾಪಿಸುತ್ತಿದ್ದೇವೆ"

"ನಮ್ಮ ತಂಡದಿಂದಲೇ ಸಕಲ ಮಾಹಿತಿ ಲಭ್ಯ. ಹೊಸ ತಾಜಾ ಸುದ್ದಿಗಳಿಂದ ಬರುತ್ತಲೇ ಇರುತ್ತೇವೆ. ಇಲ್ಲಿಯೇ ಕಾದು ನೋಡುತ್ತಿರಿ."

"ಇನ್ನು ಕೆಲವೇ ಸಮಯದಲ್ಲಿ ಭೂಮಿಯು ಸಮುದ್ರದಲ್ಲಿ ಮುಳುಗಲಿದೆ." ಎಂಬ ಪುಕಾರು ಹುಟ್ಟಿಕೊಂಡಿತು.

ಇದನ್ನೇ ನಿಜವೆಂದು ನಂಬಿದ ಮಂದಿ ಸಾವು ಸನ್ನಿಹಿತವಾಗುತ್ತಿದೆಯೆಂದು ನಂಬಿ ಒಬ್ಬರಿಗೊಬ್ಬರು ಅನ್ಯೋನ್ಯತೆಯಿಂದಿರಲು ಪ್ರಾರಂಭಿಸಿದರು. ಅನ್ನ ದಾನಾದಿಗಳನ್ನು ಮಾಡತೊಡಗಿದರು. ಕುಶಲತೆಗಳನ್ನು ಪರಸ್ಪರರು ವಿಚಾ- ರಿಸಿಕೊಳ್ಳುತ್ತಿದ್ದರು. ಕೊನೆಗೆ ಪೂಜೆ, ಪುನಸ್ಕಾರಗಳನ್ನು ಮಾಡಿ, ಯಜ್ಞ ಯಾಗಾದಿಗಳನ್ನು ಮಾಡತೊಡಗಿದರು. ಪ್ರತಿಯೊಬ್ಬರೂ ಸರ್ವೇ ಜನಾಃ ಸುಖಿನೋ ಭವಂತು ಎಂದು ಆಗಾಗ ಹೇಳಿಕೊಳ್ಳುತ್ತಿದ್ದರು ಹಾಗೂ ಒಮ್ಮನಸ್ಸಿನಿಂದ ದೇವ ದೇವನಲ್ಲಿ ಪ್ರಾರ್ಥಿಸತೊಡಗಿದರು.

@@@@@@@@


ಇಂದ್ರನ ಸಭೆಯಲ್ಲಿ ತ್ರಿಮೂರ್ತಿಗಳ ಸಮೇತ ಸೇರಿದ್ದು ಎಲ್ಲರ ಮುಖದಲ್ಲಿಯೂ ಗಾಬರಿ ತಾಂಡವವಾಡುತ್ತಿತ್ತು.

ಭೂಲೋಕದಲ್ಲಿರುವ ಭಕ್ತಾದಿಗಳೆಲ್ಲ ಆತಂಕ ವ್ಯಕ್ತಪಡಿಸಿ ತಲ್ಲಣರಾಗಿ ವೈಕುಂಠದಲ್ಲಿ ಒಟ್ಟಾಗಿ ಸೇರಿ ತಮ್ಮ ಸಮಸ್ಯೆಗಳನ್ನು ಈಡೇ- ರಿಸಲು ಕೇಳಿಕೊಂಡಿದ್ದರು.

ಇಂದ್ರನ ಸಭೆ ಪ್ರಾರಂಭವಾಯಿತು. "ಭೂಲೋಕದಲ್ಲಿ ಎಲ್ಲರೂ ಗೊಂದಲದಲ್ಲಿ ಮುಳುಗಿದ್ದಾರೆ. ಅಸ್ತವಾಗಬೇಕಾಗಿದ್ದ ಸೂರ್ಯ ನಿಂತಂತೆ ಭಾಸ. ಆದರೆ ವಾಸ್ತವವಾಗಿ ಭೂಮಿಯೇ ನಿಂತಂತಾಗಿದೆ" ಎಂದರು ಒಬ್ಬರು.

"ಭುವಿಯಲ್ಲಿನ ಜನರು ಕರೋನದ ಹಿನ್ನೆಲೆಯಲ್ಲಿ ಯಜ್ಞ ಯಾಗಾದಿಗಳನ್ನು ಪೂಜಾಕರ್ಮಗಳನ್ನು ಪಾರಾಯಣಗಳನ್ನು ಮಾಡಿ ಪಾವನರಾಗುತ್ತಿದ್ದಾರೆ ಮತ್ತು ಎರಡು ದಿನದಿಂದಲೂ ಅಧಿಕವಾಗಿ ಸತ್ಕರ್ಮಗಳಲ್ಲಿ ತಲ್ಲೀನರಾಗಿರುವರು" ಎಂದರು ಇನ್ನೊಬ್ಬರು.

"ಬೆಂಗಳೂರು ಮಹಾನಗರದಲ್ಲಿ ಜನಸಂಖ್ಯೆ ಸ್ಫೋಟವಾಗುತ್ತಿದೆ ಮತ್ತು ವಾಹನ ಸಂಚಾರ ಹೆಚ್ಚಾಗಿ ದಟ್ಟಣೆಯಲ್ಲಿ ಕಾಲವ್ಯಯವಾಗುತ್ತಿದೆ ಕಾಲುವೆಗಳ ಮಾರ್ಗ ಬದಲಿಸಿ ಸುರಂಗ ಮಾರ್ಗಗಳಿಂದ ರಸ್ತೆಗಳ ನಿರ್ಮಾಣ, ಮೇಲು ಸೇತುವೆಯ ದಾರಿಗಳು ಹಾಗೂ ಅಧಿಕ ಎತ್ತರದ ರೈಲು ಸಂಚಾರಗಳು, ನಗರದಲ್ಲಿ ನರ ನಾಡಿಯಂತೆ ಹರಿಯುತ್ತಲೇ ಇದೆ. ಇಷ್ಟೆಲ್ಲ ಇದ್ದರೂ ತಿಮ್ಮಕ್ಕರವರಿಂದ ಸಾಲುಮರಗಳು ಕಂಗೊಳಿಸುತ್ತಿದೆ. ಮತ್ತು ಇದರಿಂದ ಜನರಿಗೂ ಮರಗಿಡಗಳ ಮೇಲೆ ವಿಶ್ವಾಸವಾಗುತ್ತಿದೆ ಹಾಗೂ ಪ್ರಾಣಿಗಳು, ಪಕ್ಷಿಗಳು ಸರಾಗವಾಗಿ ಹಾರಿಕೊಂಡು ರೆಕ್ಕೆಗಳ ಬಡಿದು ತಮ್ಮ ತಮ್ಮ ಸಂತಸಗಳನ್ನು ವ್ಯಕ್ತಪಡಿಸುತ್ತ ನಲಿಯುತ್ತಿವೆ." ಎಂದರು ಮಗದೊಬ್ಬರು.



"ಮೊದಲನೇ ಬಾರಿ ಭೂಮಾತೆ ಮುನಿಸಿಕೊಂಡು ಮತ್ತೆ ಕಕ್ಷೆ ಬದಲಿಸುವಂತೆ ವಿಷ್ಣು ಅವತಾರ ಸ್ವರೂಪಿ ವರಾಹ ಸ್ವಾಮಿಗಳು ಬಂದು ಕಾಪಾಡಿ ಯಥಾಸ್ಥಿತಿಯಲ್ಲಿರುವಂತೆ ನೋಡಿಕೊಂಡರು. ಅದೇ ರೀತಿ ಭೂದೇವಿ ಇದು ಎರಡನೇ ಬಾರಿ ಮುನಿಸಿಕೊಂಡಂತಿದೆ. ಅಲ್ಲಿನ ಜನರು ಹಗಲು ರಾತ್ರಿಗಳನ್ನು ಕಾಣದೇ ತೊಂದರೆಗೆ ಸಿಲುಕಿದ್ದಾರೆ. ಮೂರು ದಿನಗಳಿಂದ ಹೀಗೇ ಇರುವುದರಿಂದ ಪಂಚಾಂಗಗಳು ಸುಳ್ಳಾಗುತ್ತಿದೆಯೆಂದು ಸಂಕಲ್ಪ ಮಾಡುವಾಗ ಗೊಂದಲಗಳಲ್ಲಿ ಮುಳುಗಿದ್ದಾರೆ" ಎಂದರು ಮೇಲಿನವರು.

"ಮುಂದಿನ ಅವತಾರ ಕಲ್ಕಿ ಎಂದು ಜನರಿಗೆಲ್ಲ ಚಿರಪ- ರಿಚಿತವಾಗಿ ಅವರಿಗಾಗಿ ಎದುರು ನೋಡುತ್ತಿದ್ದಾರೆ. ಅಂದರೆ ಇಷ್ಟರಲ್ಲೇ ಮತ್ತೆ ವರಾಹ ಸ್ವಾಮಿಯೂ ಅವತರಿಸಿ ಬರಲಿ ಎಂದು ತವಕದಿಂದ ಕಾಯುತ್ತಿದ್ದಾರೆ" ಎಂದರು ಮುಂದಿನವರು.

ಸಾಕ್ಷಾತ್ ಶ್ರೀಮನ್ನಾರಾಯಣರು ಎಲ್ಲರ ಮಾತುಗಳನ್ನು ಸೂಕ್ಷ್ಮದಿಂದ ಅವಲೋಕಿಸಿ, ನಿಂತು ಎಲ್ಲ ದೇವಾದಿ ದೇವತೆಗಳ ಒಡಗೂಡಿ, ಸಮೂಹವಾಗಿ ಸೇರಿ ಭುವಿಯ ಮುನಿಸ್ಸನ್ನು ಕಡಿಮೆ ಮಾಡಲು ಪುಷ್ಪ ವೃಷ್ಟಿಗೈದು ಅಶರೀರವಾಣಿ ಹೊರಡಿಸಿದರು.

"ಎಲೈ ಭೂಮಾತೆಯೇ ಹಿಂದಿಗಿಂತ ಎಷ್ಟೋ ಉತ್ತಮವಾಗಿದೆ ಈ ಭಾರತದಲ್ಲಿ ಅನೇಕ ಸತ್ಕರ್ಮಗಳು ನಡೆಯುತ್ತಿದೆ. ದೊಡ್ಡ ದೊಡ್ಡ ದೇವರ ವಿಗ್ರಹಗಳು ತಲೆ ಎತ್ತುತ್ತಿವೆ. ಈಗ ಗಂಗಾ ನದಿಯು ತನ್ನ ಪವಿತ್ರತೆಯನ್ನು ಕಾಪಾಡಿಕೊಂಡಿದ್ದಾಳೆ. ಶ್ರೀರಾಮನಾಗಿ ನಾಳೆ ಭೂಮಿಗೆ ಹೋಮ ಹವನಾದಿಗಳನ್ನು ಸ್ವೀಕ- ರಿಸಲು ಬರುತ್ತಿರುವೆ. ಕರೋನಾ ಮತ್ತು ಅಧಿಕ ಮಳೆಗಳಿಂದ ಜನರು ಒಂದು ಹಂತಕ್ಕೆ ಬಂದಂತಾಗಿದೆ. ವಾಹನಗಳ ಸಂಚಾರ ಕಡಿಮೆಯಾಗಲು ಶಿರಸ್ತ್ರಾಣಗಳು, ಚತುಷ್ಚಕ್ರ ವಾಹನಗಳಲ್ಲಿ ಪಟ್ಟಿ ಧಾರಣೆ ಅವಶ್ಯ ಸಂಖ್ಯಾ ಹಲಗೆ ಬದಲಿಸುವಿಕೆ, ನಿಯಮ ಪಾಲಿಸುವಿಕೆ ಇರಬೇಕು ಅದಲ್ಲದೆ ಕಂದಾಯಗಳನ್ನು ಕಟ್ಟಿ, ವಿಮೆಯನ್ನು ಮಾಡಿಸಲಿ ಇಲ್ಲವೆ ಗಾಡಿಗಳನ್ನು ಹಾಗೂ ಪರವಾನಗಿ ಇಲ್ಲದೆ ಕಟ್ಟಡಗಳನ್ನು ವಶಪಡಿಸಿಕೊಳ್ಳುವರು. ಈಗಾಗಲೇ ಅಕ್ರಮಗಳ ವಿರುದ್ಧ ಈ ಕ್ರಮ ಬಂದು ಹತೋಟಿಗೆ ಬರುತ್ತಿದೆ. ಇನ್ನೇನೂ ಯೋಚಿಸಬೇಡ. ನಿನ್ನ ಕಾರ್ಯ ನೀನು ನಿಶ್ಚಿಂತೆಯಿಂದ ನಿರ್ವಹಿಸು. ನಿನಗೆ ಶುಭವಾಗಲಿ"

"ಸಮುದ್ರೇ ವಸನೇ ದೇವಿ ಪರ್ವತ ಸ್ಥನ ಮಂಡಲೇ ।

ವಿಷ್ಣು ಪತ್ನಿ ನಮಸ್ತುಭ್ಯಂ ಪಾದ ಸ್ಪರ್ಶಂ ಕ್ಷಮಸ್ವ ಮೇ ॥

ಜೈ ಮಂಗಳಂ

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR